## 52

# “ಇನ್ನೆಂದಿಗೂ ನೀನು ಹೆದರಬೇಡ”

## (18:1-11)

ನಿಮಗೆ ಎಂದಾದರು ಭಯವಾಗಿದೆಯೇ? ನಾವು ನಮ್ಮ ಜೀವಿತಕಾಲದಲ್ಲಿ ಭಯಪಟ್ಟಿರುತ್ತೇವೆ ಮತ್ತು ನಮ್ಮಲ್ಲಿ ಕೆಲವರು ಆಗಾಗ್ಗೆ ಭಯಪಡುತ್ತಿರುತ್ತಾರೆ. ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವೆವೆಂದು ಕೆಲವು ಬಾಲಕರು ಭಯಪಡುವರು. ಕೆಲಸದಿಂದ ತೆಗೆದು ಹಾಕಲ್ಪಡಬಹುದೆಂದು ಕೆಲವರು ಭಯಪಡುತ್ತಾರೆ, ಹೊಸದಾಗಿ ಮದುವೆಯಾದವರು, ಅವರ ಪ್ರೀತಿ ತಣ್ಣಗಾಗಿ ಹೋಗಬಹುದೆಂಬ ಭಯ ಹೊಂದಿರುವರು. ಸಾವಿರಾರು ಜನರು ತಮ್ಮ ಕಳೆದು ಹೋದ ಸಂಗತಿಗಳನ್ನು ಬದಲು ಮಾಡಲಾರರೆಂಬ ಭಯವನ್ನು ಹೊಂದಿರುವರು. ಅನಿಶ್ಚಯವಾದ ವರ್ತಮಾನ ಹಾಗೂ ಭವಿಷ್ಯದ ಕುರಿತು ಭಯ ಹೊಂದಿರುವರು.

ಭಯವು ಮಾನವ ಜೀವಿತದ ಒಂದು ಭಾಗವಾಗಿದೆ. ಸಂದೇಹವಿದ್ದರೆ “ಭಯ” ಎಂಬ ಪದ ಹಾಗೂ “ಹೆದರಿಕೆ” ಎಂಬ ಪದಗಳನ್ನು ನೋಡಿರಿ. ಸತ್ಯವೇದದಲ್ಲಿರುವ ಪ್ರಮುಖ ವ್ಯಕ್ತಿಗಳಾದ, ಅದಾಮ, ಅಬ್ರಹಾಮ, ಸಾರಳು ಲೋಟನು, ಇಸಾಕನು, ಯಾಕೋಬನು, ಅವನ ಮಕ್ಕಳು ಭಯಗ್ರಸ್ಥರಾಗಿದ್ದರು ಎಂಬ ಉದಾಹರಣೆಯನ್ನು ನೋಡುತ್ತೇವೆ (ಆದಿಕಾಂಡ 3:10; 15:1; 18:15; 19:30; 20:11; 26:7; 31:31; 43:18). ಭಯವು ಸ್ವಾಭಾವಿಕವಾದರೂ ಅದರಲ್ಲಿ ಮುಂದವರಿಯುವದು ಸ್ವಾಭಾವಿಕವಲ್ಲ.

ನಮ್ಮ ಈ ಅಧ್ಯಯನದಲ್ಲಿ ಪೌಲನಿಗಿದ್ದ ಮಿತಿಮೀರಿದ ಭೀತಿಯ ಕುರಿತು ನೋಡುತ್ತೇವೆ, ಮತ್ತು ಅದನ್ನು ಬಯಸಲು ಅವನು ಹೊಂದಿದ ದೈವ ಸಹಾಯವನ್ನು ನೋಡುತ್ತೇವೆ - ಅದೇ ದೇವರು ನಮ್ಮ ಭಯವನ್ನು ನಿವಾರಣೆ ಮಾಡುತ್ತಾನೆ.

ಪ್ರಪಂಚದಲ್ಲಿ ವ್ಯಾಸಂಗದ ಹಾಗೂ ಸಾಂಸ್ಕೃತಿಕ ಕೇಂದ್ರವಾದ, ಅಥೇನೆ ಪಟ್ಟಣದಲ್ಲಿ ಪೌಲನು ಪ್ರಸಂಗ ಮಾಡುತ್ತಿದ್ದನು. ಅಧ್ಯಾಯ 18 ಈ ಒಂದು ಮಾಹಿತಿಯೊಂದಿಗೆ ಆರಂಭವಾಗುತ್ತದೆ: “ಇದಾದ ಮೇಲೆ ಪೌಲನು ಅಥೇನಯನ್ನು ಬಿಟ್ಟು ಕೊರಿಂಥಕ್ಕೆ ಹೋದನು”[1] ಕೊರಿಂಥವು ಪಶ್ಚಿಮ ದಿಕ್ಕಿಗೆ ನಾಲ್ವತ್ತು ಮೈಲುಗಳ ಅಂತರದಲ್ಲಿತ್ತು, ಒಂದು ವೇಳೆ ಪೌಲನು ಇನ್ನೊಂದು ದೇಶಕ್ಕೆ ಹೊರಟಿರಬಹುದು.[2] ಅಥೇನೆಯು ಚಿಕ್ಕ ಪ್ರಾಮುಖ್ಯ ವಾಣಿಜ್ಯ ನಗರವಾಗಿತ್ತು. ಅಥೇನೆಯದವರು ಜ್ಞಾನದ ಬಂಡಾರವಾಗಿದ್ದರೆ, ಕೊರಿಂಥದವರು; ದೈಹೀಕ ಸಂಗತಿಗಳ ಬಗ್ಗೆ ಆಸಕ್ತಿ ತಳೆದಿದ್ದರು. ಅಥೇನೆಯವರು ಸತ್ಯವನ್ನು ಶೋಧಿಸುವಾಗ, ಕೊರಿಂಥದವರು ಆಶೆಗಳನ್ನೇ ಹಿಂಬಾಲಿಸುತ್ತಿದ್ದರು.

### ಪೌಲನಿಗೊಂದು ಸಮಸ್ಯೆಯಿತು (18:1, 9)

ಅಪೊಸ್ತಲರ ಕೃತ್ಯಗಳು 18:1-8ರಲ್ಲಿ ಪೌಲನು ಕೊರಿಂಥದಲ್ಲಿ ಸೇವೆಯನ್ನು ಪ್ರಾರಂಭ ಮಾಡಿದ ದಿವಸಗಳ ಕುರಿತು ಗಮನಿಸುವಾಗ, ಅವನು ಜಯದ ಮೇಲೆ ಜಯವನ್ನು ಹೊಂದಿದನು ಎಂದು ತೋರುತ್ತದೆ. ಅಲ್ಲಿ ಪೌಲನು ಆನಂದದಿಂದಲೂ ಮತ್ತು ಅಪರಿಮಿತವಾದ ಭರವಸೆಯಿಂದಲೂ ಇದ್ದನೆಂದು ಭಾವಿಸಬಹುದಾಗಿತ್ತು. “ನೀನು ಹೆದರಬೇಡ”[3] ಎಂಬ ಸಂದೇಶದಿಂದ ಕರ್ತನು ಪೌಲನಿಗೆ ಪ್ರತ್ಯಕ್ಷನಾದನು ಎಂದು ವಚನ 9ನ್ನು ಓದುವಾಗ ನಮಗೆ ಆಶ್ಚರ್ಯವನ್ನುಂಟು ಮಾಡುತ್ತದೆ. “ನೀನು ಹೆದರಲೇ ಬಾರದು,” ಅವನು ಭಯಗೊಂಡಿದ್ದ ವಿಷಯವನ್ನು ನಾವು ಅರಿಯೆವು ಪೌಲನು, ಗೊಂದಲಮಯವಾದ ಕೊರಿಂಥ

ಮಹಾಪಟ್ಟಣವನ್ನು ಸೇರುವಾಗ ಭಯದಿದ ತುಂಬಿದವನಾಗಿದ್ದನು ಎಂದು ತಿಳಿಯುತ್ತೇವೆ.

ಪೌಲನು ಕೊರಿಂಥದಲ್ಲಿ ಸೇವೆಯನ್ನು ಮಾಡುವಾಗ ಈ ವಿಷಯವನ್ನು ನಾವು ಅರಿಯುತ್ತೇವೆ. ಪೌಲನು, ಯಥಾರ್ಥವಾದ ಬರವಣಿಗೆಯ ಸೇವೆಯನ್ನು ಆರಂಭ ಮಾಡಿದ್ದನು.[4] ಆದ್ದರಿಂದ ಈ ಪತ್ರಿಕೆಯಿಂದ ಕೆಲವು ಲೂಕನ ಬರವಣಿಗೆಗೆ ಹಲವಾರು ಅಂಶಗಳನ್ನು ಪಡಕೊಳ್ಳುತ್ತೇವೆ.[5] ಆ ಪತ್ರಿಕೆಯಲ್ಲಿ, ಅವನ ಕೊರಿಂಥದ ಅನುಭವವನ್ನು ತಿಳಿಸಿರುವನು:

> ಸಹೋದರರೇ, ನಾನಂತೂ ದೇವರು ಹೇಳಿಕೊಟ್ಟ ಮಾತನ್ನು ತಿಳಿಸುವವನಾಗಿ ನಿಮ್ಮ ಬಳಿಗೆ ಬಂದಾಗ ವಾಕ್ಚಾತುರ್ಯದಿಂದಾಗಲಿ ಜ್ಞಾನಾಡಂಬರದಿಂದಾಗಲಿ ಬರಲಿಲ್ಲ. ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವದನ್ನೂ ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು. ಇದಲ್ಲದೆ ನಾನು ನಿಮ್ಮಲ್ಲಿಗೆ ಬಂದಾಗ ನಿಮ್ಮ ಬಳಿಯಲ್ಲಿ ಬಲಹೀನನೂ ಭಯಪಡುವವನೂ ಬಹು ನಡುಗುವವನೂ ಆಗಿದ್ದೆನು (1 ಕೊರಿಂಥ 2:1-3).

ಪೌಲನು ಭಯದಿಂದ ನಡುಗುತ್ತಾ ಕೊರಿಂಥಕ್ಕೆ ಏಕೆ ಬಂದನು? ಪೌಲನಿದ್ದ ಸನ್ನಿವೇಶವನ್ನು ಮಾನವೀಯ ಬುದ್ಧಿಯಿಂದ ಗ್ರಹಿಸಿ, ಕೆಲವು ಊಹೆಗಳನ್ನು ಮಾಡಬಹುದು.

### ಇತ್ಯಾರ್ಥಗೊಳ್ಳದ ಭೂತಕಾಲ

ಪೌಲನ ಹಿಂದಿನ ಜೀವಿತದಲ್ಲಿ ಉಂಟಾದ ಕೆಲವು ಘಟನಾವಳಿಗಳು, ಅವನ ಮನಸ್ಸಿನಲ್ಲಿ ಕಾರ್ಯಮಾಡುತ್ತಿತು. ಅಥೇನದಲ್ಲಿ ಜರುಗಿದ ಸಣ್ಣ ಘಟನೆಗಳು ಅವನಲ್ಲಿ ಭೀತಿಯನ್ನು ಉಂಟು ಮಾಡಿತ್ತು. ಅಥೇನದಲ್ಲಿ ಕೆಲಕಾಲ ಇದ್ದ ನಂತರ, ಉದ್ದೇಶ ಪೂರ್ವಕವಾಗಿ ಪೌಲನು ಅಲ್ಲಿಂದ ಹೊರಟು ಹೋದನು. (ಅಥೇನವನ್ನು ಬಿಡಬೇಕೆಂಬ ಒತ್ತಾಯವು ಈ ಪ್ರಾಂತದಲ್ಲಿ ಮಾತ್ರ ಉಂಟಾಗಲಿಲ್ಲ!)

ಅಥೇನಿಯರ ತತ್ವಜ್ಞಾನಿಗಳ ಬಳಿ ಪೌಲನು ಹೆಚ್ಚು ಕಾರ್ಯವನ್ನು ಮಾಡಲು ಸಾಧ್ಯವಾಗಲಿಲ್ಲ. ಫಿಲಿಪ್ಪಿ, ಥೆಸಲೋನಿಕ, ಹಾಗೂ ಬೆರೂಯ ಸಭೆಯ ಕುರಿತು ಅವನು ಚಿಂತಿಸಿದನು (2 ಕೊರಿಂಥ 11:28). ಮುಖ್ಯವಾಗಿ ತಾನು ಹೊರ ಹೋಗಬೇಕೆಂದು ಒತ್ತಾಯಪಡಿಸಿದ ಥೆಸಲೋನಿಕ ಸಭೆಯ ಕುರಿತು ಯೋಚಿಸುತ್ತಿದ್ದನು. ಶೋಧಕನು (ಅವರನ್ನು) ಶೋಧಿಸಿಸಬಹುದೆಂದು ಮತ್ತು ಅಲ್ಲಿ ಅವನು ಮಾಡಿದ ಸೇವೆಯು ವ್ಯರ್ಥವಾಯಿತೆಂದು ಭಯಗೊಂಡನು (1 ಥೆಸಲೋನಿಕ 3:5).

### ಅನಿಶ್ಚಯದ ವರ್ತಮಾನ ಕಾಲ

ನಾವು ಮಾಡುವ ಹಾಗೆಯೇ, ಅವನು ವರ್ತಮಾನಕಾಲದ ಪರಿಸ್ಥಿತಿ ಬಗ್ಗೆಯೂ ಚಿಂತಿಸಿದನು. ಅವನ ಸನ್ನಿವೇಶವು ಪ್ರೋತ್ಸಾಹದಾಯಕವಾಗಿದ್ದರೂ, ಅವನು ಒಂಟಿಯಾಗಿಯೇ ಇದ್ದನು. ಅವನ ಮನವಿಯನ್ನು ಮನ್ನಣೆ ಮಾಡಿ, ತಿಮೊಥಿ ಹಾಗೂ ಸೀಲರು ಅವನನ್ನು ಸೇರಿಕೊಂಡಾಗಲೂ, ತಕ್ಷಣವೇ ಅವರನ್ನು ಅವನು ಮೆಕೆದೋನ್ಯಕ್ಕೆ ಕಳುಹಿಸಿನು.[6] ಅದುದರಿಂದ ಅವನು ಒಂಟಿಯಾಗಿದ್ದನು. ಲೂಕನು ಅವನ ಸಂಗಡ ಇರದೆ ಇರುವಾಗ, ಕೊರಿಂಥದಲ್ಲಿ ಪೌಲನು ಅಸ್ವಸ್ಥಗೊಂಡಿರಲೂ ಬಹುದು![7] ಮತ್ತು ಹಣವಿಲ್ಲದೆ, ಅರ್ಧ ಮಿಲಿಯ ಜನರ ನಡುವೆ ಏಕಾಂಗಿಯಾಗಿರಬಹದು (1 ಕೊರಿಂಥ 2:3ರಲ್ಲಿ ದೈಹೀಕ ತೊಂದರೆಯ ಬಲಹೀನತೆಯಾಗಿರಬಹುದು). 2 ಕೊರಿಂಥ 12:7ರಲ್ಲಿ ಪೌಲನು, "ಒಂದು ಶೂಲ ನನ್ನ ಶರೀರದಲ್ಲಿ ನಾಟಿದೆ" ಎಂದು ಹೇಳಿರುವನು, ಪ್ರಾಯಶಃ ಕೊರಿಂಥದವರು ಈ ವಿಚಾರವನ್ನು ಅರಿತಿದ್ದರು. ಬಡತನದೊಂದಿಗೆ ಸೇರಿರುವ ಒಂಟಿತನವು ಎಂಥಾ ದೃಢವುಳ್ಳ ಹೃದಯಗಳಿಗೂ ಅನಾರೋಗ್ಯವನ್ನು ತರುವ ಸಾಧ್ಯತೆಯಿದೆ.

ಕೊರಿಂಥದವರಿಂದ ಅವನಿಗೆ ಬೆದರಿಕೆಯೂ ಉಂಟಾಗಿರಬಹುದು, ಅದು ಮಹಾ ಪಟ್ಟಣವಾಗಿ, ಐಶ್ವರ್ಯವುಳ್ಳ, ಹಾಗೂ ಭ್ರಷ್ಟತನದಿಂದ ಕೂಡಿತ್ತು. ಅದು ಕಡಿದಾದ ಮಾರ್ಗದಲ್ಲಿದ್ದು, ಪರ್ಯಾಯ[8] ದ್ವೀಪದ ಮೂಲಕ ಗ್ರೀಸ್ ದೇಶಕ್ಕೆ ಜೋಡಣೆಯಾಗಿತ್ತು. "ಗ್ರೀಸ್‌ನ ಹೆಚ್ಚಾದ ಸ್ಥಳವನ್ನು ಸಮುದ್ರವು ಅವರಿಸಿತ್ತು"[9] ಪೂರ್ವ ಪಶ್ಚಿಮದವರು ಕೊರಿಂಥದ ಮೂಲಕವೇ ಹಾದು ಹೋಗಬೇಕಿತ್ತು. ಅಪಾಯಕರವಾದ ಸಮುದ್ರ ಪ್ರಯಾಣವು, ಉತ್ತರ ದಕ್ಷಿಣದವರನ್ನು ಕೊರಿಂಥದ ಮೂಲಕ ಹಾದು ಹೋಗುವಂತೆ ಮಾಡಿತ್ತು. ಪಾರ್ಯಾಯ ದ್ವೀಪದ ತುದಿಯಲ್ಲಿ ಮಲಿಯ ಎಂಬ ಸ್ಥಳವಿದ್ದು ಅಲ್ಲಿನ ನೀರು ರಭಸವಾಗಿತ್ತು. ನಾವಿಕರು ಒಂದು ನುಡಿಮುತ್ತನ್ನು ಹೇಳುತ್ತಿದ್ದರು: "ಮಲಿಯಕ್ಕೆ ಸಮುದ್ರ ಪ್ರಯಾಣ ಮಾಡುವ ವ್ಯಕ್ತಿಯು ತನ್ನ ಅಸ್ತಿ ಪತ್ರವನ್ನು ಬರೆದು ಸಿದ್ದವಿಡಲಿ" ಎರಡನೂರು ಮೈಲಿಗಳ ಮಲಿಯದ ಪ್ರಯಾಣವನ್ನು ತಪ್ಪಿಸಲು, ರೋಮಾದಿಂದ ಬರುತ್ತಿದ್ದ ಹಡಗುಗಳು ಲಿಕಿಯೋಮ ಮಾರ್ಗವಾಗಿ (ಉತ್ತರ ಕೊರಿಂಥಿಗೆ) ಹೋಗುತ್ತಿದ್ದರು; ಅಲ್ಲಿ ಅವರು ತಮ್ಮ ಸರಕುಗಳನ್ನು ಇಳಿಸಿ, ಮತ್ತು ಅಲ್ಲಿಂದ ಸರಕುಗಳನ್ನು ತೆಗೆದುಕೊಂಡು ಕೆಲವಾರು ಮೈಲುಗಳ ದೂರವಿದ್ದ ಕೆಂಕ್ರೆಗೆ ಹೋಗುತ್ತಿದ್ದರು.[10] (ಪೂರ್ವ ಕೊರಿಂಥ) ಅಲ್ಲಿ ಇತರೇ ಹಡಗುಗಳಿಗೆ ಸರಕುಗಳನ್ನು ಸಾಗಿಸುತ್ತಿದ್ದರು.[11] (ಸಣ್ಣ ಹಡಗುಗಳನ್ನು ಇಸ್ತುಮಸ್‌ನಲ್ಲಿದ್ದ ಮರದ ಮಾರ್ಗವಾಗಿ ಎಳೆದು ಕೊಂಡು ಹೋಗುತ್ತಿದ್ದರು![12]) ಈಗೆ ಕೊರಿಂಥದಲ್ಲಿ ಪ್ರಪಂಚದ ವ್ಯವಹಾರ ನಡೆಯುತ್ತಿತ್ತು!

ಕೊರಿಂಥದಲ್ಲಿ ಪ್ರಪಂಚದ ಅತಿ ಪ್ರಾಮುಖ್ಯವಾದ ವಾಣಿಜ್ಯ ವ್ಯವಹಾರ ನಡೆಯದಿದ್ದರೂ, ಆದಾಗ್ಯೂ ಪ್ರಪಂಚದ ದೃಷ್ಟಿಯಲ್ಲಿ, "ಒಳ್ಳೆಯ ಸಮಯದ ಅನುಭವಕ್ಕಾಗಿ ಅಲ್ಲಿ ಹೋಗುವರು" ಎಂಬ ಹೇಳಿಕೆಯಿತ್ತು. ಆ ಸ್ಥಳದ ತುದಿಯಲ್ಲಿ ಅಕ್ರೊ - ಕೊರಿಂಥವಿತ್ತು,[13] ಅಲ್ಲಿ ಅಫ್ರೊದೀತನ ದೇವಾಲಯವಿತ್ತು, ಪ್ರೀತಿ ಸೂಚಿತ ದೇವತೆ.[14] ಸಾಮಾನ್ಯ ಇತಿಹಾಸಕಾರರು ಅಲ್ಲಿದ್ದ ಒಂದು ಸಾವಿರ ಮಂದಿ ಮಹಿಳಾ ಪೂಜಾರಿಗಳ ಕುರಿತು ಹೇಳುವರು (ವೇಶ್ಯೆ ಪಂಥದವರು) ಅವರು ದಾಸಿ ವೃತ್ತಿ ಮಾಡುವವರು, ಅವರು ರಾತ್ರಿ ಸಮಯದಲ್ಲಿ ಬೆಟ್ಟದಿಂದ ಇಳಿದು, ಪಟ್ಟಣಕ್ಕೆ ಬಂದು ತಮ್ಮ ವೃತ್ತಿಯನ್ನು ಮಾಡುತ್ತಿದ್ದರು,[15] ಕೊರಿಂಥದವರ ಕುರಿತು ಅವಹೇಳನವಾದ ಭಾಷೆಯನ್ನು ಪ್ರಯೋಗ ಮಾಡಲಾಗುತ್ತಿತ್ತು: "ಕೊರಿಂಥದವನೆಂದರೆ" ಹಾದರ ಮಾಡುವವನು, "ಕೊರಿಂಥದ ಹುಡುಗಿ" ಎಂದರೆ ವ್ಯಭಿಚಾರಿಣಿ ಎಂಬ ಅರ್ಥ.[16]

ಪೌಲನು ಕೊರಿಂಥದವರ ಶರೀರದಾಶೆಗಳು, ವಿಗ್ರಹಾರಾಧನೆಗಳನ್ನು,[17] ಜ್ಞಾನದ ಹೆಮ್ಮೆಯನ್ನು ನೋಡುವಾಗ[18] ಅವನಲ್ಲಿ ತೀವ್ರವಾದ ಹುಮ್ಮಸ್ಸು ಉಂಟಾಗಿರಬಹುದು. ಕೊರಿಂಥದ ಕುರಿತು ಅವನಲ್ಲಿ ಉಂಟಾದ ಸವಾಲಿನ ಕುರಿತು ಮೊದಲ ಕೊರಿಂಥ ಪತ್ರಿಕೆಯಲ್ಲಿ:

> ಅನ್ಯಾಯಗಾರರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂಬದು ನಿಮಗೆ ತಿಳಿಯದೋ? ಮೋಸಹೋಗಬೇಡಿರಿ, ಜಾರರು ವಿಗ್ರಹಾರಾಧಕರು ವ್ಯಭಿಚಾರಿಗಳು ವಿಟರು ಪುರುಷಗಾಮಿಗಳು ಕಳ್ಳರು ಲೋಭಿಗಳು ಕುಡಿಕರು ಬೈಯುವವರು ಸುಲುಕೊಳ್ಳುವವರು ಇವರೊಳಗೆ ಒಬ್ಬರಾದರೂ ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ. ನಿಮ್ಮಲ್ಲಿ ಕೆಲವರು ಅಂಥವರಾಗಿದ್ದೀರಿ; ಆದರೂ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮದಲ್ಲಿಯೂ ತೊಳೆದುಕೊಂಡಿರಿ, ದೇವಜನರಾದಿರಿ, *ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ* (1 ಕೊರಿಂಥ 6:9-11; ಒತ್ತಿ ಹೇಳಿದ್ದು ನನ್ನದು).

ಅಥೇನವು ಆತ್ಮೀಕವಾದ ಬಂಜರು ಭೂಮಿಯಾಗಿದ್ದರೆ, ಕೊರಿಂಥವು ಸೂರ್ಯನಿಂದ ಸುಡಲ್ಪಟ್ಟ ಮರುಭೂಮಿಯಾಗುತ್ತಿತ್ತು.

ಅನೇಕರಾದ ನಾವು ಪೌಲನೊಂದಿಗೆ ನಮ್ಮನ್ನು ಹೋಲಿಸಿಕೊಳ್ಳಬಹದು. ಅಸಾಧ್ಯವೆನ್ನಿಸುವ ಅನೇಕ ಸವಾಲುಗಳನ್ನು ನಾವು ಎದುರಿಸಿದ್ದೇವೆ ನಾನು ಸಹ ಆಸ್ಟ್ರೇಲಿಯಾದ,

ಸಿಡ್ನಿಯಲ್ಲಿ, ಪೈಲಾನ್ ಬೆಟ್ಟದ ತುದಿಯಿಂದ ಸಿಡ್ನಿ ಹಾರ್ಬರ ಸೇತುವೆಯನ್ನು ನೋಡುವಾಗ ನಮ್ಮ ಈ ಚಿಕ್ಕ ಗುಂಪು ಅಷ್ಟು ದೊಡ್ಡ ಪಟ್ಟಣದಲ್ಲಿ ಸೇವೆಮಾಡಲು ಸಾಧ್ಯವೆನಿಸುತ್ತಿತ್ತು.

**ಅಹಿತವೆನಿಸುವ ಸಂಭವನೀಯತೆ**

ಅಂತಿಮವಾಗಿ, ಪೌಲನು ಅವನ *ಭವಿಷ್ಯದ* ಬಗ್ಗೆಯೂ ಚಿಂತಿಸಿದನು ಕೊರಿಂಥದ ವಾಣಿಜ್ಯ ವ್ಯವಹಾರವು ಆಕಸ್ಮಿಕವಾಗಿ ಅನೇಕ ಯೆಹೂದ್ಯರನ್ನು ಆಕರ್ಷಿಸಿತು. ಈ ವಿಷಯದ ಮೂಲಕ ಆ ಪಟ್ಟಣದಲ್ಲಿ ಯೆಹೂದ್ಯರ ಸಭಾಮಂದಿರವಿರುವ ಸಂಭವವಿದ್ದದ್ದರಿಂದ ಪೌಲನು ಅಲ್ಲಿಂದ ಸೇವೆಯನ್ನು ಆರಂಭಿಸಿದನು, ಮತ್ತು ತೊಂದರೆಯು ಸಮೀಪದಲ್ಲಿತ್ತು ಎಂಬರ್ಥ. ಪೌಲನ ಸೇವೆಯಲ್ಲಿ ಮೂಲ ನಿದರ್ಶನದ ಬೆಳವಣಿಗೆಯಿತ್ತು: (1) ಆರಂಭದಲ್ಲಿ ಯಶಸ್ವಿ ಹೊಂದಿದನು; (2) ಬಲವಾದ ವಿರೋಧವಿತ್ತು; (3) ಅವನನ್ನು ಕೀಳಾಗಿ ನೋಡುವ ಸಂಭವವಿತ್ತು. ಇತರ ಪಟ್ಟಣಗಳಲ್ಲಿ ಅವನಿಗೆ ಜನರು ಹೊಡೆದರು, ಕಲ್ಲೆಸೆದರು, ಸೆರೆಮನೆಗೆ ಹಾಕಿದರು ಮತ್ತು ಪಟ್ಟಣವನ್ನು ಬಿಟ್ಟು ಹೋಗಲು ಒತ್ತಾಯಿಸಿದರು. ಈ ವಿಧವಾದ ಬೇಸರಿಕೆಯು ಬಲವುಳ್ಳ ಮನುಷ್ಯನನ್ನು ಅನೇಕ ಸಾರಿ ಬಾಧಿಸುವಾಗ, ಅದು ಅವನ ಮೇಲೆ ಪರಿಣಾಮ ಬೀರುತ್ತದೆ.

## ದೇವರ ಬಳಿ ಉತ್ತರಗಳಿದ್ದವು (18:2-11)

ಪೌಲನು "ಬಲಹೀನತೆಯಲ್ಲಿಯೂ, ಭಯದಲ್ಲಿಯೂ, ಮತ್ತು ನಡುಗುತ್ತಾಯಿರುವಾಗ" ದೇವರು ಅವನನ್ನು ತಳ್ಳಿಬಿಡಲಿಲ್ಲ. ನಂತರ ಕರ್ತನ ಕುರಿತು ಪೌಲನು ಬರೆದು "ಆತನು ಕನಿಕರವುಳ್ಳ ತಂದೆಯೂ ಸಕಲವಿಧವಾಗಿ ಸಂತೈಸುವ ದೇವರೂ ಆಗಿದ್ದು ನಮಗೆ ಸಂಭವಿಸುವ ಎಲ್ಲಾ ಸಂಕಟಗಳಲ್ಲಿ ನಮ್ಮನ್ನು ಸಂತೈಸುತ್ತಾನೆ." ಎಂದು ಬರೆದನು (2 ಕೊರಿಂಥ 1:3, 4). ಇತರೆ ಸನ್ನಿವೇಶಗಳಲ್ಲಿ ಕೊರಿಂಥದಲ್ಲಿ ದೇವರು ಅವನನ್ನು ಎಂಥವರಿಗೆ ಸಂತೈಸಿದನೆಂಬ ಆಲೋಚನೆಯನ್ನು ಅವನ ಮನಸ್ಸಿನಲ್ಲಿಟ್ಟುಕೊಂಡಿದ್ದನು. ನಮ್ಮ ಆತ್ಮಗಳು ಸೂರ್ಯನ ಬೆಳಕಿನಲ್ಲಿ ಬೆಳಗಾಗುವಾಗ ಮಾತ್ರ ದೇವರು ನಮ್ಮ ಸಂಗಡವಿರದೇ; ನಮ್ಮ ಹೃದಯಗಳಿಗೆ ಕತ್ತಲು ಆವರಿಸುವಾಗಲೂ ನಮ್ಮ ಸಂಗಡವಿರುವನು. ನಾವು ಒಂಟಿಗರಾಗಿರುವಾಗ ದೇವರು ನಮ್ಮನ್ನು ತಳ್ಳಿಬಿಡುವದಿಲ್ಲ. ಅಧೈರ್ಯಗೊಳಿಸುವದಿಲ್ಲ, ಮತ್ತು ಭ್ರಮನಿರಸನ ಮಾಡುವದಿಲ್ಲ.

ಪೌಲನಿಗೆ ದೇವರು ಏನು ಮಾಡಿದನು? ನಮ್ಮ ವಾಕ್ಯದ ಪ್ರಕಾರ ದೇವರು ಅವನನ್ನು ಪರಿಹರಿಸುವಲ್ಲಿ ಮುಂದಾದನು.

**ಸಂಬಂಧಗಳನ್ನು ಸಹಿಸಿಕೊಳ್ಳುವದು (ವಚನಗಳು 2, 3)**

ಮೊದಲನೆಯದಾಗಿ, ದೇವರು ಪೌಲನಿಗೆ ಸಂಬಂಧಗಳನ್ನು ಸಹಿಸಿಕೊಳ್ಳುವಂತ ಶಕ್ತಿಯನ್ನು ನೀಡಿದನು. ಭಯವು ನಮ್ಮನ್ನು ನುಂಗುವಂತ ಸಮಯದಲ್ಲಿ ಸ್ನೇಹದಿಂದ ನಮಗೆ ಬಲವುಂಟಾಗುತ್ತದೆ.

> ಪೊಂತದಲ್ಲಿ[19] ಹುಟ್ಟಿದ ಅಕ್ವಿಲನೆಂಬ[20] ಒಬ್ಬ ಯೆಹೂದ್ಯನನ್ನು ಅಲ್ಲಿ ಕಂಡನು.[21] ಯಹೂದ್ಯರೆಲ್ಲರೂ ರೋಮಾಪುರವನ್ನು ಬಿಟ್ಟುಹೋಗ ಬೇಕೆಂದು ಕ್ಲೌದಿಯ[22] ಚಕ್ರವರ್ತಿಯ ವಿಧಿಸಿದಕಾರಣ ಅಕ್ವಿಲನೂ ಅವನ ಹೆಂಡತಿಯಾದ ಪ್ರಿಸ್ಕಿಲ್ಲಳೂ ಕೆಲವು ದಿವಸಗಳ ಮುಂಚೆ ಇತಾಲ್ಯ ದೇಶದಿಂದ ಅಲ್ಲಿಗೆ ಬಂದಿದ್ದರು (ವಚನಗಳು 2, 3).

ಕ್ರಿ.ಶ. 49ರಲ್ಲಿ ರೋಮಾಪುರದ ಯೆಹೂದ್ಯರಿಗೆ ಈ ಸ್ಥಳವು ನಿಷಿದ್ಧವಾಗಿತ್ತು[23] ಎಂದು ಸಾಮಾನ್ಯ ಬರಹಗಾರರು ತಿಳಿಸಿರುವರು. ಸ್ಯೂತೋನಿಯನನ ಹೇಳಿಕೆಯನ್ನು ಅನೇಕ

ಪಂಡಿತರುಗಳು ಮಾನ್ಯಮಾಡಿರುವರು. "ಕ್ಲಡಿಯಸನ್ನು ಯೆಹೂದ್ಯರು ಒಳಗಾಗಿ ದೂಂಬಿ ಎಬ್ಬಿಸುತ್ತಿದ್ದರು"[24] ಕ್ರಿಸ್ತನ ಉಪದೇಶದ ಕುರಿತು ಕ್ರೈಸ್ತರ ಮತ್ತು ಯೆಹೂದ್ಯರ ನಡುವೆ ಇದ್ದ ವ್ಯತ್ಯಾಸವೂ ಆಗಿರಬಹುದು,[25] ಕ್ರೈಸ್ತತ್ವವು ಯೆಹೂದ್ಯರಿಂದ ಬಂದ ಪಂಗಡವೆಂದು ರೋಮಾಯರು ತಿಳಿದಿದ್ದರಿಂದ, ಕ್ರೈಸ್ತರನ್ನೂ, ಹಾಗೂ ಯೆಹೂದ್ಯರನ್ನೂ ಬಹುಶಃ ನಿರಾ ಕರಿಸಿದ್ದರು.[26]

ಪೌಲನು ಅಕ್ವಿಲ ಮತ್ತು ಪ್ರಿಸ್ಕಿಲ್ಲರನ್ನು ಸಂಧಿಸಿದಾಗ, ಅವರು ಕ್ರೈಸ್ತರಾಗಿರಬಹುದೆಂಬ ಸಂಶಯವಿದೆ. ನಂಬಿದವರೂ ಹಾಗೂ ನಂಬದೆ ಇದ್ದವರೂ, ಲೂಕನ ಮೌನದ ಬಗ್ಗೆ ಯಾವುದೇ ಅಂಶವನ್ನು ಹೊಂದಿರುವದಿಲ್ಲ: "ಅವರು ಕ್ರೈಸ್ತರಾಗದೆ ಇದ್ದರೆ, ಅವರ ಪರಿವರ್ತನೆಯ ಬಗ್ಗೆ ಲೂಕನು ಏಕೆ ತಿಳಿಸಲಿಲ್ಲ?"; "ಒಂದು ವೇಳೆ ಅವರು ಈಗಾಗಲೇ ಕ್ರೈಸ್ತರಾಗಿದ್ದರೆ, ಅಕ್ವಿಲನನ್ನು ಯೆಹೂದ್ಯ ಎಂದು ಕರೆಯದೆ ಕ್ರೈಸ್ತನು ಎಂದು ಏಕೆ ಲೂಕನು ಕರೆದನು?" ಕೊರಿಂಥದ ಸೇವೆಯ ಮೊದಲ ದಿವಸಗಳಲ್ಲಿ, ದೀಕ್ಷಸ್ನಾನ ಹೊಂದಿದವರ ಪಟ್ಟಿಗೆ ಅವರನ್ನು ಏಕೆ ಸೇರ್ಪಡೆ ಮಾಡಿರುವದಿಲ್ಲ (1 ಕೊರಿಂಥ 1:14-16) ಅವರನ್ನು ಅವನು ಸಂಧಿಸುವ ಮೊದಲ ಸಮಯದಲ್ಲಿ ಕ್ರೈಸ್ತರಾಗಿದ್ದರು.[27] ಪೌಲನನ್ನು ಸಂಧಿಸಿದಾಗ ಅವರು ಕ್ರೈಸ್ತರಾಗದೆ ಇದ್ದರೆ, ಪೌಲನು ಅವರನ್ನು ಪ್ರತಿದಿನ ಸಂಧಿಸಿದಾಗ, ಯೇಸುವೇ ಮೆಸ್ಸಿಯನು ಎಂದು ದೃಢಪಡಿಸಿರಬಹುದು.

ಪೌಲನು ಅಕ್ವಿಲನನ್ನು "ಕಂಡುಕೊಂಡನು" ಎಂಬ ವಾಕ್ಯವು ಹೇಳುತ್ತದೆ; ಹೇಗೆ ಉಂಟಾಯಿತು ಎಂದು ಅರಿಯೆವು. ಆ ಯೆಹೂದ್ಯರ, ಸಂಗಡ ಅಕ್ವಿಲನು ಸಭಾ ಮಂದಿರದಲ್ಲಿರುವಾಗ ಪೌಲನು ಅವನನ್ನು ಕಂಡುಕೊಂಡನು.[28] ಪ್ರಾಯಶಃ ಅವರ ಅಂಗಡಿಯಲ್ಲಿ ಪೌಲನು ಕೆಲಸವನ್ನು ಕೇಳಿಕೊಂಡಿರಬಹುದು, ಅಲ್ಲಿ ಅವನು ಅಕ್ವಿಲ ಮತ್ತು ಪ್ರಿಸ್ಕಿಲರನ್ನು ಸಂಧಿಸಿದಾಗ, ಅವರು ಅವನ ಜೀವನ ಪರ್ಯಾಂತರದ ಸ್ನೇಹಿತರಾದರು, ನಂತರ ಅವರನ್ನು ಕುರಿತು, "ಕ್ರಿಸ್ತ ಯೇಸುವಿನ ನನ್ನ ಜೊತೆ ಕೆಲಸದವರಾದ ಪ್ರಿಸ್ಕಳಿಗೂ ಅಕ್ವಿಲನಿಗೂ ನನ್ನ ವಂದನೆಗಳನ್ನು ಹೇಳಿರಿ"[29] ಎಂದು ಪೌಲನು ಬರೆದನು. ಅವರು ನನ್ನ ಪ್ರಾಣದ ಸಂರಕ್ಷಣೆಗಾಗಿ ತಮ್ಮ ಪ್ರಾಣಗಳನ್ನು ಅಪಾಯಕ್ಕೆ ಗುರಿ ಮಾಡಿದರು (ರೋಮಾಪುರ 16:3, 4).[30]

**ಸಹಿಸಿಕೊಳ್ಳುವ ನಿಯತ ಕ್ರಮ (ವಚನಗಳು 2-4)**

ದೇವರು ಪೌಲನಿಗೆ ಮಾಡುವದ್ದಕ್ಕಾಗಿ ಒಂದು ಕೆಲಸವನ್ನು ನೀಡಿದ್ದನು. ಧೃತಿಗೆಡು ವಾಗ, ನಾವುಗಳು ಒಂದು ಕೆಲಸದಲ್ಲಿ, ತಲ್ಲಿನರಾಗಬೇಕು. ನಾವು ನಿಯತ ಕ್ರಮದಲ್ಲಿ (ಮಾಮೂಲಿನಂತೆ) ಕೆಲಸ ಮಾಡುವಾಗ. ಭಯದ ವಾತಾವರಣವು ಹೊರಟು ಹೋಗುತ್ತದೆ.

ಮೊದಲನೆಯದಾಗಿ ದೇವರು ಅವನಿಗೆ ಒಂದು ದೈಹಿಕ ಕೆಲಸವನ್ನು ನೀಡಿದನು. "ಪೌಲನು ಅವರ ಮನೆಗೆ ಹೋಗಿ ತಾನೂ ಅವರು ಒಂದೇ ಕಸಬಿನವರಾಗಿದ್ದರಿಂದ ಅವರಲ್ಲಿದ್ದು ಅವರೊಂದಿಗೆ ಕೆಲಸ ಮಾಡುತ್ತಿದ್ದನು. ಗುಡಾರ ಮಾಡುವದು ಅವರ ಕಸಬಾಗಿತ್ತು" (ವಚನಗಳು 2ಬಿ, 3). ಇದೇ ಮೊದಲನೆಯ ಬಾರಿಗೆ ಪೌಲನ ಕಸುಬಿನ ಕುರಿತು ಓದುತ್ತೇವೆ. ರಬ್ಬಿಯ ತರಬೇತಿಯನ್ನು ಪೌಲನು ಹೊಂದಿದ್ದಾಗ್ಯೂ, ಗುಡಾರದ ಕೆಲಸವನ್ನು[31] ಅವನು ಕಲಿತಿದ್ದನು. ಪೌಲನು ವಾಸಿಸಿದ್ದ ಕಿಲಿಕ್ಯ ಪ್ರಾಂತ್ಯವು, ಆಡುಗಳ ಕೂದಲನ್ನು ಹದಮಾಡಿ, ಅದರಿಂದ ಬಟ್ಟೆಗಳನ್ನು ತಯಾರು ಮಾಡುವಲ್ಲಿ ಪ್ರಖ್ಯಾತವಾಗಿತ್ತು, ಮತ್ತು ಅದು ಗುಡಾರಗಳನ್ನು ನೇಯಲು ಯೋಗ್ಯವಾಗಿತ್ತು, ಆದ್ದರಿಂದ ಪೌಲನು ಸ್ವಾಭಾವಿಕವಾಗಿ ಆ ಕೆಲಸವನ್ನು ಕಲಿಯಬೇಕಾಯಿತು.[32] ಗ್ರಿಕ್‌ನಲ್ಲಿ "ಗುಡಾರ ನೇಯುವವನು" ಅಂದರೆ "ಚರ್ಮಕಾರನು" ಎಂಬ ಅರ್ಥ. ಬಟ್ಟೆ ಹಾಗೂ ಚರ್ಮದ ಕೆಲಸದಲ್ಲಿ ಪೌಲನು ಪ್ರವೀಣನಾಗಿದ್ದನು.

ಪೌಲನು ಕೊರಿಂಥಕ್ಕೆ ಬಂದಾಕ್ಷಣ, ದೈಹೀಕ ಕೊರತೆಗಳನ್ನು ನೀಗಿಸಿಕೊಳ್ಳುವದಕ್ಕಾಗಿ ಕೆಲಸ ಮಾಡಬೇಕಾಯಿತು. ಹೇಗೂ ಅವನ ಸಂಪಾದನೆ ಪ್ರಗತಿಹೊಂದಿದ್ದರೂ, ಅವನು ತನ್ನ ಸ್ವಂತ ಕೈಗಳಿಂದ ಕೆಲಸಮಾಡಿದನು (1 ಕೊರಿಂಥ 4:12), "ಅವನು ಹಣಕ್ಕಾಗಿ ಸುವಾರ್ತೆ ಸಾರಿದನು" ಎಂಬುದನ್ನು ತಪ್ಪಿಸಲು ಈ ಕೆಲಸ ಮಾಡಿದನು (1 ಕೊರಿಂಥ 9:11, 12).[33]

ಪೌಲನು ಅಕ್ವಿಲ ಮತ್ತು ಪ್ರಿಸ್ಕಿಲ್ಲರೊಂದಿಗೆ ಕೇವಲ ಕೆಲಸ ಮಾಡುವದಲ್ಲದೆ, ಅವರ ಮನೆಯಲ್ಲೇ ವಾಸ ಮಾಡಿದನು. ಪ್ರಾಯಶಃ ಅವರು ಅಂಗಡಿಯ ಹಿಂಭಾಗದಲ್ಲಿ ಮನೆಯನ್ನು ಹೊಂದಿರಬಹುದು. ಬಹುಶಃ ಅವರ ಮನೆಯಲ್ಲಿಯೇ ಕೊರಿಂಥ ಸಭೆಯು ಆರಂಭವಾಗಿರ ಬಹುದು.[34]

ಕೈಯಿಂದ ಕೆಲಸಮಾಡಿ ದುಡಿಯುವ ಅವಕಾಶವನ್ನು ಮಾತ್ರ ನೀಡದೆ, ಸುವಾರ್ತೆ ಸಾರುವ ಉದ್ದೇಶವನ್ನು ದೇವರು ಪೌಲನ ಜೀವಿತದಲ್ಲಿ ಸಾಫಲ್ಯ ಮಾಡಿದನು. ವಾಣಿಜ್ಯ ಪಟ್ಟಣವಾದ ಕೊರಿಂಥವು ಸಭಾಮಂದಿರವನ್ನು ಹೊಂದಿದ್ದರಿಂದ, ಪೌಲನು ಸೇವೆ ಯನ್ನು ಆ ಸ್ಥಳದಿಂದ ಆರಂಭಿಸಿದನು. ಆದ್ದರಿಂದ ಪೌಲನು, "[ಶಾಸ್ತ್ರಾಧಾರದಿಂದ ಅವರ ಸಂಗಡ ವಾದಿಸಿದನು 17:2]. ಅವನು ಪ್ರತಿ ಸಬ್ಬತ್ ದಿನವೂ ಸಭಾ ಮಂದಿರದಲ್ಲಿ ಚರ್ಚಿಸಿ ಯೆಹೂದ್ಯರನ್ನೂ ಗ್ರೀಕರನ್ನೂ ಒಡಂಬಡಿಸುತ್ತಿದ್ದನು" (18:4). ಗ್ರೀಕರು ದೇವ ಭಯವಿರುವವರಾಗಿರಬಹುದು, ಇವರು ಪಟ್ಟಣದ ಬಂಡು ತನಕ್ಕೆ ಬೇಸರಗೊಂಡು, ಉತ್ತಮವಾದದ್ದನ್ನು ಹುಡುಕುತ್ತಿರಬಹುದು. "... ಒಂದು ವೇಳೆ ಪೌಲನು ಸಭಾ ಮಂದಿರದಲ್ಲಿ ತನ್ನ ಮೂಲ ಪಾಠವಾದ, [ಶಾಸ್ತ್ರಧಾರದ ಮೂಲಕ] ಕ್ರಿಸ್ತನಿಗೆ [ಮೆಸ್ಸೀಯನು] ಸಾಕ್ಷಿಕರಿಸಿ, ಆತನು ಸಂಕಟಕ್ಕೊಳಗಾಗಿ, ಸತ್ತು, ಜೀವಿತನಾಗುವನು ಎಂದು ಆಧಾರ ನೀಡಿರಬಹುದು, ..." (17:3).

ಕೊರಿಂಥದ ಸಭಾ ಮಂದಿರದಲ್ಲಿದ್ದ ಒಂದು ಕಲ್ಲಿನ ಹಲಿಗೆಯನ್ನು ಕಂಡುಕೊಳ್ಳಲಾಗಿದೆ, ಬಹುಶಃ ಪೌಲನು ಪ್ರಸಂಗಿಸಿದ ಪ್ರತಿಯೊಂದು ಸಭಾಮಂದಿರದಲ್ಲೂ ಈ ವಿಧದ ಕಲ್ಲಿನ ಹಲಿಗೆಗಳಿರ ಬಹುದು.[35]

## ಆಸಕ್ತಿಕರವಾದ ಪುನರ್ಮಿಲನ (ವಚನಗಳು 5-8)

ಪೌಲನು ದೈಹಿಕವಾಗಿಯೂ, ಆತ್ಮೀಕವಾಗಿಯು ಶ್ರಮ ಪಡುವಾಗ, ಅವನ ಇಬ್ಬರು ಜೊತೆ ಸೇವಕರ ಆಗಮನದ ಮೂಲಕವಾಗಿ ಅವನಿಗೆ ಚೈತನ್ಯ ಉಂಟಾಯಿತು. ಹೊಸದಾದ ಇಬ್ಬರ ಸ್ನೇಹಿತರಿಗಿಂತ, ಈ ಹಳೆಯ ಸ್ನೇಹಿತರು ಪ್ರಮುಖವಾಗಿದ್ದರು. "ಸೀಲನೂ ತಿಮೊಥೆಯನೂ ಮೆಕೆದೊನ್ಯದಿಂದ ಇಳಿದು ಬಂದರು" (ವಚನ 5ಎ). ಪೌಲನು ಅವರನ್ನು ಮೆಕೆದೋನ್ಯದಲ್ಲಿ ಬಿಟ್ಟು ಬಂದ ನಂತರ, "ಸೀಲನನ್ನು ತಿಮೊಥೆಯನನ್ನು ಕೂಡಿದ ಮಟ್ಟಿಗೆ ಬೇಗ ನನ್ನ ಬಳಿಗೆ ಬರಹೇಳಿರಿ" ಎಂಬ ವರ್ತಮಾನವನ್ನು ಕಳುಹಿಸಿದ್ದನು (17:15). 1 ಥೆಸಲೋನಿಕ 3:1-5 ತಿಮೊಥೆಯು ಅಥೇನದಲ್ಲಿದ್ದ ಪೌಲನನ್ನು ಸೇರಿಕೊಂಡನು ಎಂಬ ಸೂಚನೆಯಿದೆ, ಆದರೆ ಪೌಲನು ತಕ್ಷಣವೇ ಅವನನ್ನು ಥೆಸಲೋನಿಕದವರಿಗೆ ಬಲಪಡಿಸಲು ಕಳುಹಿಸಿದ್ದನು.[36] ಬಹುಶಃ ಸೀಲನು ಪೌಲನನ್ನು ಸೇರಿರ ಬಹುದು, ನಂತರ ಅವನನ್ನು ಫಿಲಿಪ್ಪಿಗೆ ಕಳುಹಿಸಲಾಯಿತು.[37]

ಸೀಲ ಮತ್ತು ತಿಮೊಥೆಯರ ಆಗಮನವು, ಪೌಲನನ್ನು ಅನೇಕ ವಿಧವಾಗಿ ಬಲಪಡಿಸಿತು. ಅವರ ಸಹವಾಸವು ಅವನಿಗೆ ಉತ್ತೇಜನವಾಯಿತು. ಪೌಲ ಸೀಲ ಹಾಗೂ ತಿಮೊಥೆಯರು ಪ್ರಿಸ್ಕಿಲ್ಲಳ ಅಡಿಗೆ ಕೋಣೆಯ ಬಳಿಯಲ್ಲಿ ನಿಂತುಕೊಂಡು, ಅಳುತ್ತಿರಬಹುದು. ನಂತರ ಆನಂದ ವಾಗಿರಲೂ ಬಹುದು, ನಂತರ ಪರಸ್ಪರ ವರ್ತಮಾನವನ್ನು ಹಂಚಿಕೊಂಡಿರಬಹುದು. ಅದರ ಸಂಗಡ, ತಿಮೊಥೆಯು ಥೆಸಲೋನಿಕ ಸಭೆಯಿಂದ ಶುಭಸಮಾಚಾರವನ್ನು ತಂದಿದ್ದನು. ಪೌಲನು ಥೆಸಲೋನಿಕೆಯವರಿಗೆ ಬರೆಯುವಾಗ, "ಆದರೆ ತಿಮೊಥೆಯನು ಈಗಲೇ ನಮ್ಮ ಬಳಿಗೆ ಬಂದು ನಿಮ್ಮ ವಿಶ್ವಾಸ ಪ್ರೀತಿಗಳ ವಿಷಯವಾಗಿ ಶುಭವರ್ತಮಾನವನ್ನು

ಹೇಳಿ, ನೀವು ನಮ್ಮನ್ನು ಯಾವಾಗಲೂ ಚೆನ್ನಾಗಿ ಜ್ಞಾಪಕಮಾಡಿಕೊಂಡು ನಾವು ನಿಮ್ಮನ್ನು ಹೇಗೋ ಹಾಗೆಯೇ ನೀವೂ ನಮ್ಮನ್ನು ನೋಡುವದಕ್ಕೆ ಅಪೇಕ್ಷಿಸುತ್ತಿರೆಂಬದನ್ನು ತಿಳಿಸಿದ್ದಾನೆ ಸಹೋದರರೇ, ಇದನ್ನು ಕೇಳಿ ನಮ್ಮ ಎಲ್ಲಾ ಕೊರತೆಯಲ್ಲಿಯೂ ಸಂಕಟದಲ್ಲಿಯೂ ನಿಮ್ಮ ನಂಬಿಕೆಯ[38] ಮೂಲಕ ನಮಗೆ ಆದರಣೆಯಾಯಿತು'' ಎಂದು ತಿಳಿಸಿದನು (1 ಥೆಸಲೋನಿಕ 3:6, 7). ''ಮೆಕೆದೋನ್ಯದಿಂದ ಬಂದ ಸಹೋದರರು ನನಗೆ ಬೇಕಾದದ್ದೆಲ್ಲವನ್ನು ಕೊಟ್ಟರು''[39] ಇವರು ನೀಡಿದ ಹಣದ ಸಹಾಯದಿಂದ, ಪೌಲನು ತನ್ನ ಪ್ರಥಮ ಪ್ರೀತಿಗೆ ಹಿಂದಿರುಗಿದನು (2 ಕೊರಿಂಥ 11:9). ''ಅದು ಸುವಾರ್ತಾ ಪ್ರಚಾರವೇ. ಸೀಲನೂ ತಿಮೊಥೆಯನೂ ಮೆಕೆದೋನ್ಯದಿಂದ ಬಂದಾಗ ಪೌಲನು ದೇವರ ವಾಕ್ಯವನ್ನು ಬೋಧಿಸುವದರಲ್ಲಿ ಅತ್ಯಾಸಕ್ತಿಯುಳ್ಳವನಾದನು''[40] (ವಚನ 5ಎ).

ಅವರಿಬ್ಬರ ಆಗಮನದ ಮೂಲಕ, ಪೌಲನು ಸಭಾಮಂದಿರದಲ್ಲಿ ಧೈರ್ಯವಾಗಿ ಮಾತನಾಡಿದನು. ಈ ಹಿಂದೆ ಅವನು, ''ಮೆಸ್ಸಿಯನು ಸಂಕಟವನ್ನು ಅನುಭವಿಸಿ, ಮರಣವನ್ನು ಹೊಂದಿ, ಜೀವಿತನಾಗಿ ಎದ್ದು ಬಂದನು'' ಎಂದು ತಿಳಿಯಪಡಿಸಿದ್ದನು. ಈಗ ಇನ್ನೊಂದು ಆಲೋಚನೆಯಿಂದ ಸಮಾಪ್ತಿ ಮಾಡಿದನು, ''*ಯೇಸುವೇ* ಬರಬೇಕಾದ ಕ್ರಿಸ್ತನೆಂದು ಯೆಹೂದ್ಯರಿಗೆ ಖಂಡಿತವಾಗಿ ಸಾಕ್ಷಿ ಹೇಳಿದನು'' (ವಚನ 5ಬಿ; ಒತ್ತಿ ಹೇಳಿದ್ದು ನನ್ನದು).[41]

''ಆಗ ಯೆಹೂದ್ಯರು ಎದುರಿಸಿ ದೂಷಿಸಲಾಗಿ'' (ವಚನ 6ಎ). ಅವನು ತನ್ನ ವಸ್ತ್ರಗಳನ್ನು ಝಾಡಿಸಿ ಅವರಿಗೆ - ನಿಮ್ಮ ನಾಶನಕ್ಕೆ ನೀವೇ ಹೊಣೆ, ನಾನು ಇಂದಿನಿಂದ ಶುದ್ಧ ಮನಸ್ಸುಳ್ಳವನಾಗಿ ''ಅನ್ಯ ಜನರ ಬಳಿಗೆ ಹೋಗುತ್ತೇನೆ ಎಂದು ಹೇಳಿದನು''[42] (ವಚನ 6ಬಿ). ಪೌಲನ ಮಾತು ಹಾಗೂ ಕ್ರಿಯೆಗಳು ಹಳೇ ಒಡಂಬಡಿಕೆಯ ಚಿಹ್ನೆಯಲ್ಲಿ ಅಡಕವಾಗಿತ್ತು, ಈ ಹಿಂದೆ ಪೌಲ ಬಾರ್ನಬರನ್ನು, ಪಿಸಿದ್ಯದ ಅಂತಿಯೋಕ್ಯದ ಯೆಹೂದ್ಯರು ಇವರನ್ನು ತಳ್ಳಿಬಿಟ್ಟಾಗ, ''ಇವರು ತಮ್ಮ ಕಾಲಿನ ದೂಳನ್ನು ಅವರ ಮೇಲೆ ಝಾಡಿಸಿ ಬಿಟ್ಟಿದ್ದರು'' (13:50, 51); ಈಗ ಪೌಲನು ತನ್ನ ವಸ್ತ್ರಕ್ಕೆ ಅಂಟಿದ್ದ ದೂಳನ್ನು ಝಾಡಿಸಿದ ಸಂಗತಿಯು, ಅದೇ ಸಂದೇಶವನ್ನು ಹೇಳುತ್ತಿತ್ತು; ''ನಿಮ್ಮನ್ನು ದೇವರು ತಿರಸ್ಕರಿಸಿದ್ದರಿಂದ'' ನಿಮ್ಮೊಂದಿಗೆ ನಾನು ಯಾವುದೇ ಸಂಬಂಧವನ್ನು ಹೊಂದುವದಿಲ್ಲ ಎಂದು ಹೇಳಿದನು![43]

''ನಿಮ್ಮ ನಾಶನಕ್ಕೆ ನೀವೇ ಹೊಣೆ'' ಎಂಬ ವ್ಯಾಖ್ಯಾನವನ್ನು ಯೆಹೆಜ್ಕೇಲ 3 ಮತ್ತು 33ರಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ದೇವ ಸಂದೇಶಕನು, ಕೆಟ್ಟವನನ್ನು ಎಚ್ಚರಿಸದೆ ಹೋದರೆ, ಆ ಮನುಷ್ಯನು ತನ್ನ ಕೆಟ್ಟತನದಲ್ಲಿಯೇ ನಾಶವಾಗುವನು - ಅವನನ್ನು ಎಚ್ಚರಸಿದವನ ಕೈಯಿಂದ ರಕ್ತದ ಅಗತ್ಯವಿದೆ (ಯೆಹೆಜ್ಕೇಲ 3:18; 33:8). ಇನ್ನೊಂದು ವಿಧದಲ್ಲಿ, ದುಷ್ಟನನ್ನು ದೇವರ ಮನುಷ್ಯನು ಎಚ್ಚರಿಸಿದ್ದರೂ, ಸಂದೇಶಕನು ತನ್ನ ಆತ್ಮವನ್ನೇ ನೀಡಿದವನಾಗಿರುವನು (ಯೆಹೆಜ್ಕೇಲ 3:19; 33:9) ಎಚ್ಚರಿಕೆಯನ್ನು ಕೇಳಿದವನು ಅದನ್ನು ಅಲಕ್ಷಿಸಿದ್ದರೆ, ''ಅವನ ರಕ್ತವು ಅವನ ತಲೆಯ ಮೇಲೆ ಇರುತ್ತದೆ'' (ಯೆಹೆಜ್ಕೇಲ 33:4; ಇದನ್ನು ನೋಡಿರಿ ಯೆಹೋಶುವ 2:19).

ನಂತರ ಪೌಲನು ಸಭಾಮಂದಿರವನ್ನು, ಬಿಟ್ಟು ಬಹುದೂರ ಹೋಗದ, ಸಮೀಪದಲ್ಲಿ, ದೇವರ ಭಯವನ್ನು[44] ಹೊಂದಿದ್ದವನ ಮನೆಯಲ್ಲಿ ಆಶ್ರಯಪಡಕೊಂಡನು. ಪೌಲನು, ''ಆ ಸ್ಥಳವನ್ನು ಬಿಟ್ಟು ದೇವರಿಗೆ ಭಯಪಡುವವನಾಗಿದ್ದ ತೀತ ಯುಸ್ತನೆಂಬವನ ಮನೆಗೆ ಹೋದನು.[45] ಅವನ ಮನೆ ಸಭಾಮಂದಿರದ ಮಗ್ಗುಲಲ್ಲೇ ಇತ್ತು'' (ವಚನ 7).[46] ಪೌಲನೇ ತನ್ನ ಕೈಯಾರೆ ದೀಕ್ಷಾಸ್ನಾನ ಮಾಡಿಸಿದ ಗಾಯನೇ,[47] ತೀತಯುಸ್ತನಿರಬಹುದು (1 ಕೊರಿಂಥ 1:14), ನಂತರ ಅವನು ಪೌಲನ ಜೊತೆಸೇವಕನಾದನು (ರೋಮಾಪುರ 16:23).

ಆ ಸಭಾಮಂದಿರದ ಬಳಿಯಲ್ಲಿಯೇ ದೇವರು ಅವನಿಗೆ ದಯಪಾಲಿಸಿದ ಸ್ಥಳವು ದೈವ ಇಚ್ಛೆಯ ಪ್ರಕಾರವೇ ಜರುಗಿತು ಎಂಬುದು ಅರ್ಥಮಾಡಿಕೊಳ್ಳಲಾರದ ಸಂಗತಿಯಲ್ಲ.

ಪೌಲನ ಪ್ರಸಂಗದಲ್ಲಿ ಆಸಕ್ತಿಯುಳ್ಳವರು ಸಬ್ಬತ್ ದಿನದಲ್ಲಿ, ಸಭಾಮಂದಿರದ ಪಕ್ಷದ ಮನೆಗೆ ಹೋಗಲು ಕಷ್ಟವಾಗಲಿಲ್ಲ. ಸಕಲ ರಥಗಳು ಸಭಾಮಂದಿರದ ಪಕ್ಕದ ಮನೆಯ ಬಳಿ ನಿಂತಿರುವ ವಿಷಯವು ಹಾಗೂ ಯೆಹೂದ್ಯರು ತೋರ ಗ್ರಂಥವನ್ನು ಓದುವ ಸಮಯದಲ್ಲಿ, ತೀತನ ಮನೆಯಲ್ಲಿದ್ದ ಕ್ರೈಸ್ತರು ಯೇಸುವನ್ನು ಸ್ತುತಿಸುತ್ತಿದ್ದರು ಇದು ಯೆಹೂದ್ಯರಿಗೆ ಕೋಪ ಉಂಟು ಮಾಡಿರಬಹುದು!

**ಪರಿಣಾಮಗಳನ್ನು ಮುಂದುವರಿಸಿದರು**

ಅಥೇನದ ಯಶಸ್ಸು ಶ್ರಮದಾಯಕವಾಯಿತು, ಆದರೆ ಕೊರಿಂಥದ ಪರಿಣಾಮವು ಗಣನೀಯವಾಗಿತ್ತು. (ಜ್ಞಾನಿಗಳಿಗಿಂತಲೂ, ಅಧರ್ಮಿಗಳು ಉತ್ತಮರೇ ಎಂಬ ಸೂಚನೆಯೇ?) ನಂತರ ಕರ್ತನು ಅವನಿಗೆ, "ಈ ಪಟ್ಟಣದಲ್ಲಿ ನನಗೆ ಬಹಳ ಮಂದಿ ಇದ್ದಾರೆ" ಅಂದನು (18:10). ಪೌಲನು ಅವರಿಗೆ ಬೋಧಿಸುವುದಾರೆ, ಅವರು ಸುವಾರ್ತೆಗೆ ವಿಧೇಯರಾಗುವರು. ಮೊದಲು ಅದ್ಭುತವಾದ ಜನರು ಪರಿವರ್ತನೆಗೊಂಡರು, ಸಭಾಮಂದಿರದ ಅಧ್ಯಕ್ಷನಾದ[48] ಕ್ರಿಸ್ತನು ತನ್ನ ಮನೆಯವರೆಲ್ಲರ ಸಹಿತ ಕರ್ತನಲ್ಲಿ ನಂಬಿಕೆಯಿಟ್ಟನು[49] (ವಚನ 8ಎ). ಕ್ರಿಸ್ಪನು ಎಂಬವನು ಏಕೆ ಕ್ರೈಸ್ತನಾದನುಎಂದು ನಾನು ಊಹಿಸಲಾರೆ, ಆದರೆ ನಿಮ್ಮಲ್ಲಿಯೂ ಕೆಲವರು - ಅಂತಹ ಮಹತ್ವದ ಆತ್ಮೀಕ ಬದಲಾವಣೆಯನ್ನು ಮಾಡಿಕೊಂಡಿರಬಹುದು! ಪೌಲನು ಪಕ್ಕದ ಮನೆಗೆ ಹೋರಟುಹೋದ ವಿಷಯವು ಯೆಹೂದ್ಯರನ್ನು ಕೆರಳಿಸಿದ್ದರೂ, ಸಭಾಮಂದಿರದ ಒಬ್ಬ ಅಧ್ಯಕ್ಷನು ಪೌಲನ ಕಡೆಗೆ ಹೋದ ವಿಷಯವು ಯೆಹೂದ್ಯರಲ್ಲಿ ಗೊಂದಲವುಂಟುಮಾಡಿತು.[50]

"ಕರ್ತನಲ್ಲಿ ನಂಬಿಕೆಯಿಟ್ಟನು" ಎಂಬ ಹೇಳಿಕೆಯಿಂದ ಅವನು ಕ್ರೈಸ್ತನಾಗುವದಕ್ಕೆ ಸಕಲ ಪ್ರಯತ್ನಗಳನ್ನು ಮಾಡಿದನೆಂದು ಪುನಃ ನೋಡುತ್ತೇವೆ. 1 ಕೊರಿಂಥ 1:14ರಲ್ಲಿ ಆ ಕ್ರಿಸ್ಪನು ದೀಕ್ಷಾಸ್ನಾನ ಮಾಡಿಸಿಕೊಂಡನೆಂಬುದಾಗಿದೆ (ಪೌಲನು ತನ್ನ ಕೈಯಾರೆ ಕ್ರಿಸ್ಪನಿಗೆ ದೀಕ್ಷಾಸ್ನಾನ ಮಾಡಿಸಿದ್ದನು).

ಕ್ರಿಸ್ಪನ (ಕ್ರಿಸ್ಟ್) ಪರಿವರ್ತನೆಯ ನಂತರ ಪೌಲನ ಪ್ರಸಂಗಕ್ಕೆ ವಿಧೇಯರಾದ ಇತರರ ಕುರಿತು ಲೂಕನು ತಿಳಿಸಿದನು: "ಮತ್ತು ಕೊರಿಂಥದವರಲ್ಲಿ ಅನೇಕರು ಕೇಳಿ[51] ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು" (ವಚನ 8ಬಿ). ಅಪೊಸ್ತಲರ ಕೃತ್ಯದಲ್ಲಿ ರಕ್ಷಣೆ ಹೊಂದಿದವರ ಹಾಗೆಯೇ ಕೊರಿಂಥದವರು ರಕ್ಷಿಸಲ್ಪಟ್ಟರು. "ಅನೇಕರು" ಎಂಬುದರಲ್ಲಿ ಸ್ತೆಫನನು ಹಾಗೂ ಅವನ ಮನೆಯವರೂ ಒಳಗೊಂಡಿರಬಹುದು. ನಂತರ, ಪೌಲನು ಅವರನ್ನು ಕುರಿತು, "ಅಖಾಯದ ಪ್ರಥಮ ಫಲಗಳು" ಎಂದು ಹೇಳಿದನು (1 ಕೊರಿಂಥ 16:15; ಮತ್ತೇ ನೋಡಿರಿ 1 ಕೊರಿಂಥ 1:16).[52]

**ಉತ್ತೇಜನಕರವಾದ ನಂಬಿಕೆ (ವಚನಗಳು 9-11)**

ಪೌಲನು ಕೊರಿಂಥದಲ್ಲಿ ಮಾಡಿದ ಪ್ರಥಮ ಸೇವೆಯಲ್ಲಿ ಮೇಲಿಂದ ಮೇಲೆ ಜಯವು ಅವನನ್ನು ಹಿಂಬಾಲಿಸಿತ್ತು. ವಚನ 9 ಮತ್ತು 10 ಪೌಲನು ನಕರಾತ್ಮಕವಾದ ಉದ್ವೇಗವನ್ನು ಹೊಂದಿದ್ದನೂ ಎಂದು ತಿಳಿಸುತ್ತದೆ. ಪುನಃ ಅನೇಕ ವಿಷಯಗಳ ಕುರಿತು ಯೋಚಿಸಿ ರಬಹುದು: ಬಹುಶಃ ಬಲಪ್ರದವಾದ ಶೋಧನೆಯು ಕೊರಿಂಥದವರನ್ನು ಹಿಂಜರಿಯುವಂತೆ ಮಾಡಬಹುದೆಂಬ ಶಂಕೆಯು ಅವನಲ್ಲಿರಬಹುದು. ಅತಿ ವರ್ಚಸ್ಸನ್ನು ಹೊಂದಿದವರು ದೀಕ್ಷಾಸ್ನಾನ ಮಾಡಿಸಿಕೊಂಡನಂತರ ಅವರ ಸ್ಥಾನಮಾನಗಳ ಕುರಿತು ಯೋಚಿಸುವದು ಶ್ರಮದಾಯಕವಾಗಿರಬಹುದು. ಪ್ರಾಯಶಃ ಅವನು ಆಯಾಸಗೊಂಡವನಾಗಿ ಕೊರಿಂಥಕ್ಕೆ ಬದದ್ದರಿಂದ ಅನೇಕ ದಿವಸಗಳ ನಂತರ ಅವನಿಗೆ ಚೈತನ್ಯ ಉಂಟಾಗಿರಬಹುದು. ವಚನ 10ರಲ್ಲಿ ಒಂದು ವಿಷಯವನ್ನು ನಿರ್ಧರಿಸಬಹುದು: ಯೆಹೂದ್ಯರು ಅವನನ್ನು ನಡೆಸಿಕೊಂಡ

ವಿಷಯದ ಕುರಿತು ಭಯಪಟ್ಟಿರಬಹುದು.

ಪೌಲನು ಅವನಿಗಿದ್ದ ಭಯದಿಂದ ಪಾರಾಗಲು ದೇವರು ಅವನಿಗೆ ಇನ್ನೊಂದು ಕಡೆಯ ಆಶೀರ್ವಾದವನ್ನು ನೀಡಿದನು: ಯೇಸು ಅವನನ್ನು ಸಂಧಿಸಿ ಒಂದು ಸಂದೇಶ ವನ್ನು ನೀಡಿದ್ದನು. ದಮಸ್ಕದ ದಾರಿಯಲ್ಲಿ, ಯೇಸು ಅವನಿಗೆ ಕಾಣಿಸಿಕೊಂಡಾಗ ಆಗಾಗ್ಗೆ ಪುನಃ ಕಾಣಿಸಿಕೊಳ್ಳುವೆನೆಂಬ ವಾಗ್ದಾನವನ್ನು ನೀಡಿದ್ದನು (26:16). ಇದು ವಿಶೇಷವಾದ ಸಂಧಿಸುವಿಕೆಯಾಗಿತು.[53]

> ರಾತ್ರಿ ಕಾಲದಲ್ಲಿ ಪೌಲನಿಗೆ ದರ್ಶನಕೊಟ್ಟು - ನೀನು ಹೆದರಬೇಡ; ಸುಮ್ಮನಿರದೆ ಮಾತಾಡುತ್ತಲೇ ಇರು, ನಾನೇ ನಿನ್ನೊಂದಿಗಿದ್ದೇನೆ;[54] ಯಾರೂ ನಿನ್ನ ಮೇಲೆ ಬಿದ್ದು ಕೇಡು ಮಾಡುವದಿಲ್ಲ; ಈ ಪಟ್ಟಣದಲ್ಲಿ ನನಗೆ ಬಹಳ ಮಂದಿ ಇದ್ದಾರೆ ಎಂದು ಹೇಳಿ ದನು (18:9, 10).

ಪೌಲನು ತನ್ನ ಹಿಂದಿನ ಪರಿಸ್ಥಿತಿಯ ಕುರಿತು ತೀವ್ರವಾಗಿ ಯೋಚನೆ ಮಾಡಿರಬಹುದು ಹಾಗೂ ಅವನ ವರ್ತಮಾನ ಹಾಗೂ ಭವಿಷ್ಯದ ಕುರಿತು ಯೋಚಿಸಿರಬಹುದು ಎಂದು ನಾನು ಈಗಾಗಲೇ ತಿಳಿಸಿರುವೆನು. ಯೇಸು ಅವನಿಗೆ ಕಾಣಿಸಿಕೊಂಡಾಗ, ಈ ಮೂರು ವಿಷಯಗಳನ್ನು ಅವನಿಗೆ ತಿಳಿಸಿದ್ದನು: "ನೀನು ಹೆದರಬೇಡ. ಸುಮ್ಮನಿರದೆ ಮಾತಾಡುತ್ತಲೇ ಇರು" ಎಂದು ಹೇಳಿ ಭೂತ ಕಾಲದ ಸಂಗತಿಯನ್ನು ಇಲ್ಲದಂತೆ ಮಾಡಿ ವರ್ತಮಾನಕಾಲದ ನಿರೀಕ್ಷೆಯನ್ನು ನೀಡಿದನು: "ಮತ್ತು ನಾನು ಎಂಬ ಭವಿಷ್ಯದ ನಂಬಿಕೆಯನ್ನು ಉಂಟು ಮಾಡಿದನು"; "ಯಾರೂ ನಿನ್ನ ಮೇಲೆ ಬಿದ್ದು ಕೇಡು ಮಾಡುವದಿಲ್ಲ, ಈ ಪಟ್ಟಣದಲ್ಲಿ ನನಗೆ ಬಹಳ ಮಂದಿ ಇದ್ದಾರೆ ಎಂದು ಹೇಳಿದನು."

ಈ ವಾಗ್ದಾನ ಮತ್ತು ಅದರ ನೆರವೇರಿಕೆಯ ಕುರಿತು ಮುಂದಿನ ಪಾಠದಲ್ಲಿ ಅಭ್ಯಸಿಸೋಣ. ಆದರೆ ನಾನು ಈ ಕ್ಷಣದಲ್ಲಿ, ದೇವರು ಅವನಿಗೆ ದರ್ಶನ ನೀಡಿ, ಹೊಸದಾದ ಭರವಸೆಯನ್ನು ನೀಡಿದನು ಎಂದು ತಿಳಿಸುತ್ತೇನೆ. ಅವನು ಕೊರಿಂಥದಲ್ಲಿ ಒಂದೂವರೆ ವರ್ಷಗಳ ಕಾಲ ತಂಗಿದ್ದನು, ಅವನ ಸೇವಾ ಪ್ರಯಾಣದಲ್ಲಿ, ಅಧಿಕವಾದ ಸಮಯವನ್ನು ಕಳೆದ ಎರಡನೆಯ ಸ್ಥಳವು ಇದಾಗಿತ್ತು:[55] "ಅವನು ಒಂದು ವರುಷ ಆರು ತಿಂಗಳು ಅಲ್ಲೇ ಇದ್ದುಕೊಂಡು ಆ ಜನರಿಗೆ ದೇವರ ವಾಕ್ಯವನ್ನು ಉಪದೇಶ ಮಾಡುತ್ತಿದ್ದನು" (ವಚನ 11). ಈ ಸಮಯದಲ್ಲಿ ಪೌಲನು 1 ಥೆಸಲೋನಿಕ ಹಾಗೂ 2 ಥೆಸಲೋನಿಕ ಪತ್ರಿಕೆಯನ್ನು ಬರೆದನು.[56]

## ಮುಕ್ತಾಯ

ಕೊರಿಂಥದಲ್ಲಿ ಪೌಲನು ಮಾಡಿದ ಪ್ರಥಮ ಸೇವೆಯಿಂದ ಅನೇಕ ಪಾಠಗಳನ್ನು ಕಲಿಯುವ ಸಾಧ್ಯತೆಯಿದೆ: (1) ಅನೇಕ ಸಾರಿ ಭಲವಾದ ದೇವ ಸೇವಕರುಗಳು ಸಹ ಧೃತಿಗೆಡುವ ಸಾಧ್ಯತೆಯಿತ್ತು. ಪೌಲನಿಗೂ ಸಹ ಉಂಟಾಗಿತ್ತು. ನಮ್ಮ ಭಯಗಳನ್ನು ಒಪ್ಪಿಕೊಳ್ಳುವದಕ್ಕೆ ಹಿಂಜರಿಯಬಾರದು. (2) ಭಯವು ನಮ್ಮ ಹೃದಯವನ್ನು ತುಂಬುವಾಗ, ದೇವರು ನಮ್ಮನ್ನು ಬಿಟ್ಟು ಬಿಡದೆ, ನಮ್ಮ ಸಂಗಡವಿದ್ದು ಸಹಾಯಿಸುವನು, ಪೌಲನಿಗೆ ಆತನು ಉತ್ತೇಜನ ನೀಡಿದಂತೆಯೇ, ನಮಗೂ ದೃಢಪಡಿಸುವದಕ್ಕೆ ವಾಗ್ದಾನವನ್ನು ನೀಡುವನು (ರೋಮಾಪುರ 8:28). ಯೇಸು ಪೌಲನಿಗೆ, "ನಾನೇ ನಿನ್ನೊಂದಿಗಿರುವೆನು" ಎಂದು ಹೇಳಿ ದಂತೆ, ನಾನು ಯವಾಗಲೂ ನಿನ್ನೊಂದಿಗಿರುವೆನು ಎಂದು ನಮಗೂ ಹೇಳುವನು (ಮತ್ತಾಯ 28:20). (3) ನಾವು ಭಯಪಡುವಾಗ, ದೇವರನ್ನು ಬಿಡದೆ ಇದ್ದಾಗ, ಆತನು ನಮ್ಮನ್ನು ಆಶೀರ್ವದಿಸುವನು. ಆತನು ಪೌಲನನ್ನು ಆಶೀರ್ವದಿಸಿದಂತೆ, ನಮ್ಮನ್ನು ಆಶೀರ್ವದಿಸುವನು (2 ತಿಮೊಥೆ 4:17, 18)![57]

## ಪ್ರಸಂಗದ ಟಿಪ್ಪಣಿ

ಅಕ್ವಿಲ ಮತ್ತು ಪ್ರಿಸ್ಕಿಲ್ಲಳ ಕುರಿತು ವಿಶೇಷ ಪಾಠವನ್ನು ಮಾಡಿ ಅಪೊಲ್ಲೊಸನ ಪ್ರಸಗಕ್ಕೆ ಹೋಲಿಸಿ ಪ್ರಸಂಗವನ್ನು ಮಾಡಬಹುದು (18:24-28). ಪ್ರಿಸ್ಕಿಲ್ಲಳ ಹೆಸರನ್ನು ಅಕ್ವಿಲನ ಹೆಸರಿನ ಮುಂದೆ ನಮೂದಿಸಿರುವದರಿಂದ ಆಕೆಯು ಅಕ್ವಿಲನ ಹೆಂಡತಿ ಆಗಿರದೇ ಇರಬಹುದು, ಜೊತೆಯಲ್ಲಿ ಕೆಲಸಮಾಡಿರಬಹುದು. ರೋಮಾಪುರ 16:3-5; 1 ಕೊರಿಂಥ 16:19; ಮತ್ತು 2 ತಿಮೊಥೆ 4:19ರಲ್ಲಿ ಇವರ ಕುರಿತ ಹೆಚ್ಚಿನ ವಿವರಗಳಿರುತ್ತವೆ.

ಅಪೊಸ್ತಲರ ಕೃತ್ಯಗಳು 18:9, 10 ಪೌಲನಿಗೆ ಯೇಸು ಹೇಳಿದ ಮಾತುಗಳ ಕುರಿತು ಪೌಲ ರೋಜಸ್‌ರವರು: (1) "ಇನ್ನೆಂದಿಗೂ ಭಯಪಡಬೇಡ" (ಭಯದ ಬಗ್ಗೆ ಸಾಮಾನ್ಯ ಮಾತುಗಳನ್ನಾಡಿರಿ). (2) "ಮೌನವಾಗಿರದೇ ಮಾತನಾಡುತ್ತಲೇ ಇರು" (ಯೇಸುವಿನ ಕಲಿತು ಇತರರಿಗೆ ಹೇಳುವ ಅಗತ್ಯ). (3) "ನಾನು ನಿನ್ನೊಂದಿಗಿರುವದರಿಂದ, ನಿನಗೆ ಯಾರೂ ಕೇಡು ಮಾಡಲಾರರು" ಎಂಬ ಮುಖ್ಯಾಂಶವನ್ನು ನೀಡಿರುವರು. (ಯೇಸುವಿನ ವಾಗ್ದಾನ ನಿಮ್ಮೊಂದಿಗಿದ್ದು [ಕಾಯುವೆನುಮತ್ತಾಯ 28:20; 2 ಥೆಸಲೋನಿಕ 3:3]). ("No Time To Be Afraid," *The Preacher's Periodical,* May 1985.)

---

ಟಿಪ್ಪಣೆಗಳು

[1]ಪೌಲನ ಮೊದಲ ಹಾಗೂ ಎರಡನೆಯ ಸೇವಾ ಪ್ರಯಾಣದ ನಕ್ಷೆಯನ್ನು ನೋಡಿರಿ. ಗಮನ: ಪೌಲನು ಸಮುದ್ರ ಅಥವಾ ಭೂಮಾರ್ಗವಾಗಿ ಹೋಗಿರುವದು ಅನಿಶ್ಚಯ ಹಾಗೂ ಸಾಧ್ಯತೆಯು ಇರಬಹದು. [2]ದೊಡ್ಡ ಪಟ್ಟಣದಲ್ಲಿರುವ ಚಿಕ್ಕ ವಿಶ್ವವಿದ್ಯಾಲಯದ ಕುರಿತು ತಿಳಿಸಿರಿ ಅರ್ಕನ್‌ಸಾಸ್‌ನಲ್ಲಿ ಫಯಟ್ಟೆವಿಲ್ಲೆ ಎಂಬ ವಿಚಾರಣೆಯ ಕುರಿತು ನಾನು ಹೇಳುತ್ತೇನೆ. [3]ನನ್ನ NASBಯಲ್ಲಿ "ಇನ್ನೆಂದಿಗೂ" ಎಂಬುದು ಇತ್ಯಾದಿ ಭಾಷೆಯಲ್ಲಿದ್ದು ತರ್ಜುಮೆಗಾರರು ಅದನ್ನು ಸೇರಿಸಿದ್ದಾರೆ ಹೇಗೂ, ಪೌಲನ ಭಯವು ಮುಂದುವರೆದಿತ್ತೆಂಬರ್ಥ. [4]ಈ ಪತ್ರಿಕೆಗಿಂತ ಮೊದಲು ಪೌಲನು ಗಲಾತ್ಯ ಪತ್ರಿಕೆಯನ್ನು ಬರೆದಿರಬಹುದು. [5]ಹೆಚ್ಚಿನ ಮಾಹಿತಿಗಾಗಿ ಗಲಾತ್ಯ 1 ಮತ್ತು 2 ನ್ನು ಬಳಸಿದ್ದೇನೆ. [6]18:5ರ ಟಿಪ್ಪಣಿ ನೋಡಿರಿ. [7]ಆ ದಿನಗಳಲ್ಲಿ ಕೊರಿಂಥದ ಜನಸಂಖ್ಯೆಯು 200,000ರಿಂದ 500,000 ಇರಬಹುದು. [8]ಪೌಲನ ಮೊದಲ ಮತ್ತು ಎರಡನೆಯ ಸೇವಾ ಪ್ರಯಾಣದ ನಕ್ಷೆ ನೋಡಿರಿ. 2 ವರ್ಷಗಳಿಗೊಮ್ಮೆ ಕೊರಿಂಥದವರು ಪೊಸೆಡಾನ್ ದೇವತೆಯ ಸ್ಮಾರಣಾರ್ಥವಾಗಿ ಇಸ್ತೀಮಾಯಾನ ಆಟವನ್ನು ಏರ್ಪಡಿಸಿದ್ದರು. ಅಥೇನದ ಒಲಂಪಿಕ್ ಆಟದ ದೃಷ್ಟಾಂತವನ್ನು ಕೊರಿಂಥ ಪತ್ರಿಕೆಯಲ್ಲಿ ಬರೆದಿರುವನು (1 ಕೊರಿಂಥ 9:24-27). [9]Avon Malone, "The Preaching in Corinth," *Acts, the Spreading Flame* (Searcy, Ark.: Harding University, 1989), 199. [10]18:8ರ ಟಿಪ್ಪಣಿ ಹಾಗೂ ರೋಮಾಪುರ 16:1ನ್ನು ನೋಡಿ.

[11]ರೋಮಾಕ್ಕೆ ಹೋಗುವಂತಹಡಗು ಹಿಂದಿರುಗುತ್ತಿತ್ತು. [12]ನಿರೋ ಚಕ್ರವರ್ತಿಯ ದಿವಸಗಳಲ್ಲಿ ಇಸ್ತಮಸ್‌ಗೆ ಹೋಗುವ ಕಾಲುವೆಯ ಕೆಲಸ ಆರಂಭವಾಗಿ 1893ರಲ್ಲಿ ಸಿದ್ಧಗೊಂಡಿತು. ಈ ದಿನಗಳಲ್ಲೂ ಚಿಕ್ಕ ಹಡಗುಗಳು ಅಲ್ಲಿ ಚಲಿಸು ತ್ತವೆ. [13]ಅಕ್ರೊ - ಕೊರಿಂಥವು 1886 ಅಡಿಗಳ ಎತ್ತರದಲ್ಲಿದೆ. [14]ರೋಮಾಯರು ವಿನಸ್ ದೇವತೆಯೆಂದು ಕರೆಯುತ್ತಿದ್ದರು. [15]ಈ ಐತಿಹಾಸಿಕ ವ್ಯಾಖ್ಯಾನವನ್ನು ಪೌಲನ ಸಂದರ್ಶನಕ್ಕಿಂತ ಮೊದಲೇ ಬಳಸುತ್ತಿದ್ದರು, ಅವನ ದಿವಸಗಳಲ್ಲೂ ಆಚರಣೆಯಿತ್ತು ಅದರಲ್ಲಿ ಸಂದೇಹವಿಲ್ಲ 1 ಕೊರಿಂಥ 6:15, 16ಎ, 18ಎ. [16]17ನೇ ಶತಮಾನದ ಅಂತ್ಯದಲ್ಲಿ, "ಕೊರಿಂಥದವರನ್ನು" ಕುರಿತು ಅವರು ಅಮಲಿನವರೆಂದು ಶೇಕ್ಸಫಿಯರನು ತಿಳಿಸಿರುವನು. [17]ಅಪೊಲ್ಲೊ ದೇವ ಮಂದಿರವು ಪ್ರಮುಖವಾಗಿತ್ತು. ಪಾರ್ಥೆನನ 100 ವರ್ಷಗಳ ಹಿಂದೆ ಅದನ್ನು ಕಟ್ಟಿದ್ದರು. ಅದರಲ್ಲಿನ 38 ಕಂಬಗಳು ಹಾಗೆಯೇ ಇರುತ್ತವೆ. [18]1 ಕೊರಿಂಥ 1:21 ಕೊರಿಂಥದವರ ಮತ್ತು ಅಥೇನಿಯರ ಕುರಿತಾಗಿರುತ್ತದೆ. [19]ಅಕ್ವಿಲನನ್ನು ಮಾತ್ರ ಯೆಹೂದಿಯೆಂದು ಪ್ರಿಸ್ಕಿಲ್ಲಳನ್ನು ಅನ್ಯಳೆಂದು ಕರೆದಿರಬಹುದು; ಬಹುಶಃ ಅವಳೂ ಯೆಹೂದಿ ಇರಬಹುದು. [20]"ಅಕ್ವಿಲ" ಎಂದರೆ ರೋಮಾಯರ ಅರ್ಥದಲ್ಲಿ "ಹದ್ದು."

[21]ಪೊಂತ ಎಂಬುದು ರೋಮಾಯರ ಉತ್ತರ ಪ್ರದೇಶವಾಗಿತ್ತು. ಪಂಚಾಶತ್ತಮ ದಿನದಲ್ಲಿ ಪೊಂತದ

ಯೆಹೂದ್ಯರಿದ್ದರು (ಅಪೊಸ್ತಲರ ಕೃತ್ಯಗಳು 2:9). ಅಲ್ಲಿ ಸಭೆಯು ಸ್ಥಾಪಿಸಲ್ಪಟ್ಟಿರಬಹುದು (1 ಪೇತ್ರ 1:1). [22]11:28ರಲ್ಲಿ ಕ್ಲೌದ್ಯ ಎಂದು ತಿಳಿಸಲಾಗಿದೆ. ಚಕ್ರವರ್ತಿ ಅವನೊಬ್ಬನೇ ಆಗಿದ್ದರಿಂದ ಹೊಸ ಒಡಂಬಡಿಕೆಯಲ್ಲಿ ಅವನ ಹೆಸರನ್ನು ಎರಡು ಸಾರಿ ತಿಳಿಸಲಾಗಿದೆ. [23]ಅಕ್ವಿಲ ಮತ್ತು ಪ್ರಿಸ್ಕಿಲ್ಲ ಪೌಲನಿಗಿಂತ ಮುಂದಾಗಿ ಕೊರಿಂಥಕ್ಕೆ ಹೋಗಿರಬಗಹುದು. [24]Quoted by F. F. Bruce in *The Book of Acts*, rev. ed., The New International Commentary on the New Testament (Grand Rapids, Mich.: Wm. B. Eerdmans Publishing Co., 1988), 347. [25]ಕ್ರಿಸ್ಟಸ್ ಮತ್ತು "ಕ್ರಿಸ್ಟನು" ಒಂದೇ ಶಬ್ಧವಾಗಿದೆ. ಸಂಪಾದಕನು ಬರವಣಿಗೆಕಾರನ ಕೈಯಲ್ಲಿ ಬರೆಸಿರಬಹುದು. [26]ನಿಶ್ಚಯವಾಗಿಯೂ ಕ್ರೈಸ್ತರಾದ ಯೆಹೂದ್ಯರನ್ನು ಹೊರಹಾಕಿರಬಹುದು. ರೋಮಾಯದಲ್ಲಿದ್ದ ಯೆಹೂದ್ಯ ಕ್ರೈಸ್ತರಿಗಾಗಿ ಇಬ್ರಿಯ ಪತ್ರಿಕೆಯನ್ನು ಬರೆದಿರಬಹುದು ಇಬ್ರಿಯ 10:32-34 ಕೇಳುವವರಲ್ಲಿ ಪರಿಣಾಮ ಬೀರಿರಬಹುದು. [27]ಅವರು ಯಹೂದ್ಯರಾಗಿದ್ದರಿಂದ ಹೊರ ಹಾಕಲ್ಪಟ್ಟಿರಬಹುದು. [28]ಒಂದೇ ವೃತ್ತಿಯವರು U.S. ನ ಯೂನಿಯನ್ನಿನ ಹಾಗೆ. [29]ಪ್ರಿಸ್ಕಿಲ್ಲಳಿಗೆ, ಪಿಸ್ಕ ಎನ್ನುತ್ತಿದ್ದರು (1 ಕೊರಿಂಥ 16:19; 2 ತಿಮೊಥೆ 4:19) ಲೂಕನು ಪರಿಚಯವಿಲ್ಲದ ಹೆಸರನ್ನು ಬಳಸಿದನು. [30]ಪೌಲನು ಇದನ್ನು ಬರೆದಾಗ ಅಕ್ವಿಲ್ಲ ಮತ್ತು ಪ್ರಿಸ್ಕಿಲ್ಲಾ ರೋಮಾಕ್ಕೆ ಹಿಂದಿರುಗಿದ್ದರು.

[31]ರಬ್ಬಿಯು ಇತರ ವ್ಯಕ್ತಿಯನ್ನು ಕಲಿಯಬಹುದಿತ್ತು, ಅದು ಅವರನ್ನು ದೈನಂದಿನ ಸಾಮಾಜಿಕ ವಿಷಯಗಳ ಪರಿಜ್ಞಾನಕ್ಕೆ ನಡೆಸುತ್ತಿತ್ತು ಎಂದು ಯೆಹೂದ್ಯರು ನಂಬಿದ್ದರು. [32]ಪೌಲನ ತಂದೆ ಅವನಿಗೆ ತರಬೇತಿ ನೀಡಿರಬಹುದು, ಮಕ್ಕಳು ತಂದೆಯ ವ್ಯಕ್ತಿತ್ವವನ್ನು ಕಲಿಯುತ್ತಿದ್ದರು. [33]ಪೌಲನು ಈ ರೀತಿಯಾಗಿ ಸ್ವಾವಲಂಭಿಯಾಗಿದ್ದನು, ತನ್ನ ಕೇಳುಗರಿಂದ ಸಂಬಳವನ್ನು ಪಡೆಯುತ್ತಿರಲಿಲ್ಲ (ಅಪೊಸ್ತಲರ ಕೃತ್ಯಗಳು 20:34; 1 ಕೊರಿಂಥ 9:1-18; 2 ಕೊರಿಂಥ 11:7-9; ಫಿಲಿಪ್ಪಿ 4:15-17; 1 ಥೆಸಲೋನಿಕ 2:9; 4:11; 2 ಥೆಸಲೋನಿಕ 3:8). ಹೇಗೂ ಕೆಲವು ಸಭೆಗಳಿಂದ ಕಾಣಿಕೆಯನ್ನು ಸ್ವೀಕರಿಸಿದನು (1 ಕೊರಿಂಥ 9:1-18). ಇದರಿಂದ ಪೌಲನು ಟೀಕೆಗೆ ಒಳಗಾಗಲಿಲ್ಲ, ಆದಾಗ್ಯೂ ಕೆಲವರು ಅವನನ್ನು ಈ ವಿಷಯದಲ್ಲಿ ಟೀಕಿಸಿದರು (2 ಕೊರಿಂಥ 11:7-9). ಅವನು ಅದಕ್ಕೆ ಯೋಗ್ಯನಲ್ಲ ಎಂದು ಅವರು ತಿಳಿದಿರಬಹುದು! ನಾವು ಟೀಕಿಸಬಾರದು, ಯಾವುದಾದರು ಕಾರಣವನ್ನು ಹೊಂದಿರುವರು. [34]ಇತರೆ ಪಟ್ಟಣಗಳಂತೆ, ಅಕ್ವಿಲ ಹಾಗೂ ಪ್ರಿಸ್ಕಿಲ್ಲರ ಮನೆಯಲ್ಲಿ ಸಭೆಯಾಗಿ ಕೂಡುತ್ತಿದ್ದರು (ರೋಮಾಪುರ 16:3-5; 1 ಕೊರಿಂಥ 16:19). [35]"ಇಬ್ರಿಯರ ಸಭಾಮಂದಿರ" ಎಂಬ ಕಲ್ಲಿನ ಹಲಗೆಯ ಬರವಣಿಗೆ ಕ್ರಿ.ಪೂ. 100ರಿಂದ ಕ್ರಿ.ಶ. 200ರಲ್ಲಿ ಲುಕೇಮದ ಬಳಿ ಆ ಕಲ್ಲುಗಳು ದೊರೆಕಿದವು. [36]ಅಥೇನೆಯ ಬದಲು, ಥೆಸಲೋನಿಕಕ್ಕೆ ತಿಮೊಥಿ ಹೋಗಬೇಕೆಂದು ಪೌಲನು ತಿಳಿಸಿದನು (1 ಥೆಸಲೋನಿಕ 3:1, 2). [37]ಫಿಲಿಪ್ಪಿಯಿಂದ ಅವರು ಧನ ಸಹಾಯ ತಂದಿರಬಹುದು. [38]ಫಿಲಿಪ್ಪಿಯವರು ಮಾತ್ರ ಸಹಾಯಿಸಿದ್ದರು (ಫಿಲಿಪ್ಪಿ 4:15, 16) ಹಾಗೂ ಮೆಕೆದೋನ್ಯದವರೂ ಸಹಾಯಿಸಿದ್ದರು. [39]ಸೀಲ ಮತ್ತು ತಿಮೊಥಿಗೆ ಸಹೋದರರು ಎಂದು ಕರೆದಿರುವದಿಲ್ಲ. [40]ಒತ್ತಾಯಕೊಳಗಾದನು (ಅತ್ಮದಲ್ಲಿ ಕುಂದಿದನು) ವಾಕ್ಯವು ಪೌಲನನ್ನು ಒತ್ತಾಯ ಪಡಿಸಿತ್ತು. (ಯೆರೆಮೀಯನ ಮೂಳೆಗಳಲ್ಲಿ ಬೆಂಕಿ), ಅವನು ಹುಮ್ಮಸ್ಸಿನಿಂದ ಪ್ರಸಂಗಿಸಿದನು. ಇದಕ್ಕೆ ಮೆಕೆದೋನ್ಯದ ಸಹಾಯವು ಪ್ರೇರಣೆ ನೀಡಿರಬಹುದು - ಇದರಿಂದ ಅವನು ಪ್ರತಿದಿನ ತನ್ನ ಕೈಯಾರೆ ಕೆಲಸ ಮಾಡುವ ಅಗತ್ಯವಿರಲಿಲ್ಲ. NIV ಯಲ್ಲಿ ತನ್ನನ್ನು ಸುವಾರ್ತೆಗೆ ತೀವ್ರವಾಗಿ ಒಪ್ಪಿಸಿದನು (ಇದನ್ನು ಸಹ ನೋಡಿರಿ NEB ಮತ್ತು TEV).

[41]ಕೊರಿಂಥದಲ್ಲಿ ಸಂದೇಶವನ್ನು ಮುಂದುವರಿಸಿದ ಬಗ್ಗೆ 1 ಕೊರಿಂಥ 1:18-25; 2:2; 15:1-8. [42]ಮತ್ತೊಂದು ಸಾರಿ ಅನ್ಯರ ಬಳಿಗೆ ಹೋಗುವೆನು ಎಂಬುದು ಸ್ಥಳೀಯ ತಿಳುವಳಿಕೆಯಷ್ಟೆ, ಅವಕಾಶವಿರುವಾಗ ಯೆಹೂದ್ಯರಿಗೂ ಬೋಧಿಸಿದನು (ವಚನ 19ಪಿ). [43]ಅಪೊಸ್ತಲರ ಕೃತ್ಯಗಳ, 3ನೇ ಪುಸ್ತಕದಲ್ಲಿ, ಈ ಟಿಪ್ಪಣಿಯನ್ನು ನೋಡಿರಿ ·13:50, 51ರ ಟಿಪ್ಪಣಿಯನ್ನು ಹಳೇ ಒಡಂಬಡಿಕೆಯ ನೆಹೆಮೀಯ 5:13ರಲ್ಲಿ ನೋಡಿರಿ. [44]"ದೇವರ ಆರಾಧಕರು" ಅಂದರೆ "ದೇವ ಭಯವಿರುವವರು" ತೀತ ಯುಸ್ತನು ಕ್ರೈಸ್ತನಾದ ವಿಷಯ ತಿಳಿದಿರುವದಿಲ್ಲ. ಅವನು ಯಾವಾಗ ಪೌಲನನ್ನು ತನ್ನ ಮನೆಗೆ ಆಹ್ವಾನಿಸಿದನೆಂದು ತಿಳಿದಿರುವದಿಲ್ಲ. [45]ನಂತರ ಆ ತೀತನೇ ಪೌಲನ ಜೊತೆ ಸೇವಕನಾಗಿರಬಹುದೆಂಬ ಶಂಕೆಯಿದೆ (ತೀತ 1:4, 5). [46]ತೀತನ ಮನೆಯಲ್ಲಿರುವದಕ್ಕೆ, ಪೌಲನು ಅಕ್ವಿಲ ಮತ್ತು ಪ್ರಿಸ್ಕಿಲ್ಲಳ ಮನೆಯಿಂದ ಹೊರಟನು. ಯೇಸುವಿನ ಕುರಿತು ಇತರಲ್ಲಿಗೆ ಅಲ್ಲಿ ಬೋಧಿಸಲಾಯಿತು. [47]ರೋಮಾಯರಲ್ಲಿ ಸಮಾನ್ಯವಾದ ಹೆಸರು. [48]ಸಭಾಮಂದಿರದ ನಾಯಕನು, ಹೊಣೆಗಾರನಾಗಿದ್ದನು (13:15). ಕೊರಿಂಥದ ಸಭಾಮಂದಿರದಲ್ಲಿ ಒಂದಕ್ಕಿಂತ ಹೆಚ್ಚು ನಾಯಕರಿದ್ದರು (13:15). ಕ್ರಿಸ್ತನು ಹಾಗೂ ಸೊಸ್ತೆನನು ನಾಯಕರಾಗಿದ್ದರು (18:17). ಕ್ರಿಸ್ತನು ಕ್ರೆಸ್ತನಾದಾಗ, ಸೊಸ್ತೆನನನ್ನು ನಾಯಕನನ್ನಾಗಿ ಮಾಡಿರಬಹುದು. [49]ಇದು "ಕುಟುಂಬದ ಮೂರನೆಯ ಪರಿವರ್ತನೆ." [50]18:12-17ರ ನೆನಪಿರಲಿ.

[51]ಸುವಾರ್ತೆಯನ್ನು ಕೇಳುವುದು ರಕ್ಷಣೆಗೆ ಅಗತ್ಯವಾಗಿದೆ (ರೋಮಾಪುರ 10:17). [52]17:34 ಟಿಪ್ಪಣಿ ನೋಡಿರಿ ಸ್ತೆಫನನ ಮನೆಯವರಿಗೆ ಕೊರಿಂಥದಲ್ಲಿ ದೀಕ್ಷಾಸ್ನಾನವಾ ಯಿತು, "ಅಖಾಯದ ಪ್ರಥಮ ಫಲ." [53]ಅಪೊಸ್ತಲರ ಕೃತ್ಯಗಳು 9:1-6; 22:17, 18; 23:11; 27:23-25; 2 ತಿಮೊಥೆ 4:16, 17. [54]ನೋಡಿರಿ ಯೆಶಾಯ 43:5. [55]ಎಫೆಸದಲ್ಲಿ ಬಹಳಕಾಲ ಇದ್ದನು (19:10). [56]ಕೊರಿಂಥದಲ್ಲಿದ್ದ ಪೌಲನಿಗೆ ತಿಮೊಥಿಯ ವರದಿ ನೀಡಿದಾಗ, 1 ಥೆಸಲೋನಿಕ ಪತ್ರಿಕೆ ಬರೆ ಯಲಾಯಿತು (1 ಥೆಸಲೋನಿಕ 3:6). ಎರಡನೆಯ ಪತ್ರಿಕೆಯೊಂದಿಗೆ ತಿಮೊಥಿಯನ್ನು 2 ಥೆಸಲೋ ನಿಕಕ್ಕೆ ಕಳುಹಿಸಲಾಯಿತು, ಅವನು ಹಿಂದಿರಿರುಗಿದಾಗ, ಮುಂದಿನ ಪತ್ರಿಕೆಯನ್ನು ಬರೆದನು, (ಗಮನಿಸಿ ಅದು ಸಹ ಕೊರಿಂಥದಿಂದಲೇ ಬರದೆದ್ದು [ಅಪೊಸ್ತಲರ ಕೃತ್ಯಗಳು 18:5]). [57]ಪ್ರಸಂಗ ಮಾಡುವುದಾದರೆ, ಆಹ್ವಾನ ನೀಡುವಾಗ, ಕ್ರಿಸ್ತನು ಮಾಡಿದ ನಿರ್ಧಾರವನ್ನು ಮಾಡಲು ಅನುಮೋ ದಿಸಿರಿ.